ವಿಜಯಪುರ | ಸಂಪುಟ 02 | ಸಂಚಿಕೆ 63 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com | RNI NO: KARKAN/2023/86203 | ಶುಕ್ರವಾರ, ಏಪ್ರಿಲ್ 26, 2024



"ಲೋಕಸಭೆ ಚುನಾವಣೆ ಬಳಿಕ ರಾಜ್ಯ ಕಾಂಗ್ರೆಸ್ ಸರ್ಕಾರ ಪತನವಾಗಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದು ಖಚಿತ. ಆಗ ನಾನೇ ಮುಖ್ಯಮಂತ್ರಿ ಆಗುತ್ತೇನೆ. ರಾಜ್ಯದ ಎಲ್ಲ ಬಿಪಿಎಲ್ ಕುಟುಂಬಗಳಿಗೆ ಪ್ರತಿ ತಿಂಗಳು ರೂ.5 ಸಾವಿರ ನೀಡುತ್ತೇನೆ."

– ಬಸನಗೌಡ ಪಾಟೀಲ, ಯತ್ನಾಳ

ವಿಜಯಪುರ ನಗರ ಶಾಸಕರು

ಉದಯರಶ್ಮಿ ದಿನಪತ್ರಿಕೆ

## ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ & ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗೆ ಚುನಾವಣಾ ಆಯೋಗ ನೋಟಿಸ್ ಜಾರಿ

# ಪ್ರಧಾನಿ ಮೋದಿ, ರಾಹುಲ್ ನೀತಿ ಸಂಹಿತೆ ಉಲ್ಲಂಘನೆ ಆರೋಪ!

ನವದೆಹಲಿ: ಪ್ರಧಾನಿಯೊಬ್ಬರ ವಿರುದ್ಧ ಮೊದಲ ಬಾರಿಗೆ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ದೂರನ್ನು ದಾಖಲಿಸಿಕೊಂಡಿರುವ ಚುನಾವಣಾ ಆಯೋಗ, ರಾಜಸ್ಥಾನದ ಬನ್ಸ್ವಾರಾದಲ್ಲಿ ಪ್ರಧಾನಿ ನರೇಂದ್ರ ಮೋದಿ, ವಿಭಜನೆ ಮತ್ತು ಮಾನಹಾನಿಕರ ಭಾಷಣ ಮಾಡಿದ್ದಾರೆ ಎಂಬ ಪ್ರತಿಪಕ್ಷದ ಆರೋಪದ ಮೇಲೆ ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ ಅವರಿಗೆ ಗುರುವಾರ ನೋಟಿಸ್ ಜಾರಿ ಮಾಡಿದೆ. ಹಾಗೆಯೇ, ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಹೇಳಿಕೆ ವಿರುದ್ಧ ಬಿಜೆಪಿ ಸಲ್ಲಿಸಿರುವ ದೂರಿನ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಇಬ್ಬರೂ ಎಐಸಿಸಿ ಅಧ್ಯಕ್ಷರಿಗೂ ಪ್ರತ್ಯೇಕ ನೋಟಿಸ್ ನೀಡಿದೆ.

ಏಪ್ರಿಲ್ 21 ರಂದು ಬನ್ಸ್ವಾರಾದಲ್ಲಿ ಮೋದಿ ಅವರು ಮಾಡಿದ ಹೇಳಿಕೆಗಳಿಗೆ ಸಂಬಂಧಿಸಿದಂತೆ ಕಾಂಗ್ರೆಸ್, ಸಿಪಿಐ, ಸಿಪಿಐ (ಎಂಎಲ್) ಮತ್ತು ನಾಗರಿಕ ಸಮಾಜ





ಗುಂಪುಗಳು ಸಲ್ಲಿಸಿದ ದೂರುಗಳಿಗೆ ಸೋಮವಾರದೊಳಗೆ ಪ್ರತಿಕ್ರಿಯೆ ನೀಡಲು ಚುನಾವಣಾ ಆಯೋಗವು ನಡ್ಡಾ ಅವರಿಗೆ ಕಳುಹಿಸಿದ ನೋಟಿಸ್‌ನಲ್ಲಿ ಕೋರಿದೆ.

ಕಾಂಗ್ರೆಸ್ ಜನರ ಸಂಪತ್ತನ್ನು ಮುಸ್ಲಿಮರಿಗೆ ಮರುಹಂಚಿಕೆ ಮಾಡಲು ಬಯಸಿದೆ ಮತ್ತು ವಿರೋಧ ಪಕ್ಷವು ಮಹಿಳೆಯರ ಮಂಗಳಸೂತ್ರವನ್ನು ಸಹ ಬಿಡುವುದಿಲ್ಲ ಎಂಬ ಮೋದಿಯವರ ಆರೋಪಗಳನ್ನು ಈ ದೂರುಗಳು ಉಲ್ಲೇಖಿಸಿವೆ.

ಈ ಭಾಷಣ ಪ್ರಮುಖ ರಾಜಕೀಯ ವಾಗ್ವಾದಕ್ಕೆ ಕಾರಣವಾಗಿದ್ದು, ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಪ್ರಧಾನ ಮಂತ್ರಿ ಸುಳ್ಳು ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಆರೋಪಿಸಿದರು ಮತ್ತು ಸಮಾಜದ ದುರ್ಬಲ ವರ್ಗಗಳಿಗೆ ಅನ್ಯಾಯ ಮಾಡುತ್ತಾ ಮುಸ್ಲಿಂ ತುಷ್ಟೀಕರಣ ರಾಜಕಾರಣವನ್ನು ಪೋಷಿಸುತ್ತಿದೆ ಎಂದು ಬಿಜೆಪಿ ಆರೋಪಿಸಿದೆ.

ಮಾದರಿ ನೀತಿ ಸಂಹಿತೆಯ ನಿಬಂಧನೆಗಳನ್ನು ಗಮನಿಸಲು ಪಕ್ಷದ ಎಲ್ಲಾ ಸ್ಟಾರ್ ಪ್ರಚಾರಕರ ಗಮನಕ್ಕೆ ತರಲು ನಡ್ಡಾಗೆ ಸೂಚಿಸಿರುವ ಚುನಾವಣಾ




ಆಯೋಗ, ಉನ್ನತ ಹುದ್ದೆಯಲ್ಲಿರುವವರು ಮಾಡುವ ಪ್ರಚಾರ ಭಾಷಣಗಳು ಹೆಚ್ಚು ಗಂಭೀರ ಪರಿಣಾಮಗಳನ್ನು ಬೀರುತ್ತವೆ ಎಂದು ಹೇಳಿದೆ.

### ರಾಜ ನುಡಿ

ನಾನು ದಿನವಿಡೀ ಎಚ್ಚರವಿರುವಾಗ ನನ್ನನ್ನು ನನ್ನ ಬುದ್ಧಿ ಮುನ್ನಡೆಸುತ್ತದೆ. ನಾನು ಮೈ ಮರೆತು ರಾತ್ರಿ ನಿದ್ರೆ ಮಾಡುವಾಗ ಯಾರು ನನ್ನನ್ನು ಬೆಳಗಿನವರೆಗೆ ಮುನ್ನಡೆಸುತ್ತಾರೆ! ನಾನು ನನ್ನಿಂದ ಎನ್ನುವುದ ಬಿಡು ಮರುಳೇ.

–ಡಾ. ರಾಜಶೇಖರ ನಾಗೂರ



### ವಚನ ಚಿಂತನ 366

*ಆವಾಗಲೂ ಎನ್ನ ಮನ ಉದರಕ್ಕೆ ಹರಿವುದು.*
*ಕಾಣಲಾರೆನಯ್ಯಾ ನಿಮ್ಮವನು, ಭೇದಿಸಲರಿಯೆ.*
*ಮಾಯದ ಸಂಸಾರದಲ್ಲಿ ಸಿಲುಕಿದೆನು.*
*ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯಾ,*
*ನಿಮ್ಮ ಹೊದ್ದುವಂತೆ ಮಾಡಾ, ನಿಮ್ಮ ಧರ್ಮ.*

ಅಕ್ಕಮಹಾದೇವಿಯವರು ಈ ವಚನದ ಮೂಲಕ ಜನಸಾಮಾನ್ಯರ ಮನದ ಬಯಕೆಯನ್ನು ಹೊರಹಾಕಿದ್ದಾರೆ ಮನುಷ್ಯನಾಗಿ ಹುಟ್ಟಿ ಬಂದ ಮೇಲೆ ಹೊಂದಬೇಕಾದ ಅರಿವನ್ನು ಗಳಿಸಿಕೊಳ್ಳದೆ, ಕೇವಲ ಹೊಟ್ಟೆ ಹೊರೆಯುವುದನ್ನು ಮಾತ್ರ ಚಿಂತಿಸುತ್ತ ಆ ನಿಟ್ಟಿನಲ್ಲಿ ಇಡೀ ಜೀವನವನ್ನು ಉದರಪೋಷಣೆಯಲ್ಲಿ ಕಳೆಯುವವರಂತೆ ತಮ್ಮ ನಿಲುವು ಆಗಿರುವ ಬಗ್ಗೆ ಬೇಸರ ವ್ಯಕ್ತಪಡಿಸಿ ಕೊಳ್ಳುತ್ತಾ ದೈವದ ಅರಿವನ್ನು ಹೊಂದುವಲ್ಲಿ ಸಂಸಾರ ವೆಂಬ ಮಾಯದ ಮುಸುಕು ಆವರಿಸಿದ್ದು ಅದನ್ನು ಸರಿಸಿ ನಿಮ್ಮನ್ನು ಹೊಂದುವಂತೆ ಮಾಡು ಎಂದು ಚೆನ್ನಮಲ್ಲಿಕಾರ್ಜುನನಲ್ಲಿ ಮೊರೆಯಿಟ್ಟಿದ್ದಾರೆ. ಮಹಾಲಿಂಗ (ದೇವರ)ದ ಹುಡುಕಾಟ ದಲ್ಲಿ ನಿರತರಾದ ಅಕ್ಕಮಹಾದೇವಿಯವರಿಗೆ ಕಲ್ಯಾಣದ ಶರಣರ ಸಂಪರ್ಕ ವೇರ್ಪಟ್ಟ ಮೇಲೆ ಹೊರಗೆ ಹುಡುಕುವ ಮಹಾಲಿಂಗದ ಅಂಶವೇ ಪ್ರಾಣಲಿಂಗವಾಗಿ ತನ್ನ ಅಂಗದೊಳಗೆ ಅಡಗಿದೆ ಎಂಬ ಸತ್ಯ ಅರಿವಾದಾಗ ಇತರರು ಇನ್ನೂ ಹೊರಗಡೆ ಹುಡುಕುತ್ತಾ ವ್ಯರ್ಥ ಪ್ರಯತ್ನ ಮಾಡುತ್ತಿರುವುದನ್ನು ಕಂಡು "ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು. ಇರುಳು ನಾಲ್ಕುಜಾವ ವ್ಯಸನಕ್ಕೆ ಕುದಿವರು. ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ, ತಮ್ಮೊಳಗಿರ್ದ ಮಹಾಘನವನರಿಯರು ಚೆನ್ನಮಲ್ಲಿಕಾರ್ಜುನಾ" ಎಂದು ಮರುಗಿದ್ದಾರೆ. ಇದೇ ಭಾವದಲ್ಲಿ ಅಲ್ಲಮ ಪ್ರಭುಗಳು ಸಹ ಜನಸಾಮಾನ್ಯರ ಜೀವನ ಕ್ರಮವನ್ನು ವಿಮರ್ಶಿಸುತ್ತ "ಉದಯ ವಾಯಿತ್ತ ಕಂಡು ಉದರಕ್ಕೆ ಕುದಿವರಯ್ಯಾ ಕತ್ತಲೆಯಾಯಿತ್ತ ಕಂಡು ಮಜ್ಜನಕ್ಕೆರೆವರಯ್ಯಾ. ಲಿಂಗಕ್ಕೆ ನೇಮವಿಲ್ಲ.ಇರುಳಿ ಗೊಂದು ನೇಮ, ಹಗಲಿಗೊಂದು ನೇಮ ? ಲಿಂಗಕ್ಕೆ ನೇಮವಿಲ್ಲ. ಕಾಯ ಒಂದು ದೆಸೆ, ಜೀವ ಒಂದು ದೆಸೆ, ಗುಹೇಶ್ವರನೆಂಬ ಲಿಂಗ ತಾನೊಂದು ದೆಸೆ." ಎನ್ನುವುದರೊಂದಿಗೆ ಮನುಷ್ಯ ಜನ್ಮದ ಸಾಥ–ರ್ಕತೆಯು ತನ್ನ ಹೊಟ್ಟೆ ಹೊರೆಯುವುದು ಮತ್ತುಸಂತಾನದ ಬೆಳವಣಿಗೆಯಲ್ಲಿ ಮಾತ್ರ ಅಡಗಿಲ್ಲ, ತನ್ನ ಮೂಲವನ್ನು ಅರಿತುಬೆರೆ ಯುವುದಾಗಿದೆ,ಎಂದು ಎಚ್ಚರಿಸಿದ್ದಾರೆ.ಎಚ್ಚರವಾಗೋಣ ಬನ್ನಿ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ಮಹಿಳೆಯರ ಮೇಲಿನ ದೌರ್ಜನ್ಯ ಖಂಡಿಸಿ ಪಂಜಿನ ಮೆರವಣಿಗೆ

ಉದಯರಶ್ಮಿ ನ್ಯೂಸ್

ವಿಜಯಪುರ: ನಗರ ಸ್ಲಂ – ಸ್ವಸಹಾಯ ಸಂಘಗಳ ಒಕ್ಕೂಟ (ರಿ ), ವಿಜಯಪುರ ನಗರ ಸ್ಲಂ ಅಭಿವೃದ್ಧಿ ಸಮಿತಿ ಒಕ್ಕೂಟ (ರಿ ), ವಿಜಯಪುರ ನಗರ ಗೃಹ ಕಾರ್ಮಿಕರ ಯೂನಿಯನ್(ರಿ ), ನಗರ ಅಸಂಘಟಿತ ಯುವತಿಯರ ಒಕ್ಕೂಟ, ಪ್ರಗತಿಪರ ಸಂಘಟನೆಗಳ ಒಕ್ಕೂಟ ಇವರ ಸಹಯೋಗದಲ್ಲಿ ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ಹಾಗೂ ಕೊಲೆ ಆಗುತ್ತಿರುವುದನ್ನು ಖಂಡಿಸಿ ನಗರದ ಅಂಬೇಡ್ಕರ ವೃತ್ತದಿಂದ ಗಾಂಧಿ ವೃತದವರಿಗೆ ಮಹಿಳೆಯರು ಪಂಜಿನ ಮೆರವಣಿಗೆ ನಡೆಸಿದರು.



ಈ ಸಂದರ್ಭದಲ್ಲಿ ಹೋರಾಟಗಾರರನ್ನು ಉದ್ದೇಶಿಸಿ ಮಾತನಾಡಿದ ಶ್ರೀಮತಿ ನಿರ್ಮಲಾ ಹೊಸಮನಿ, ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರವೆಸಗಿ ಅವರನ್ನು ಕೊಲೆ ಮಾಡುವುದು ಈಗ ಹೆಚ್ಚಾಗಿದೆ. ಅಂತಹ ದುಷ್ಕರ್ಮಿಗಳನ್ನು ಕಠಿಣ ಶಿಕ್ಷೆಗೆ ಒಳಪಡಿಸಿ ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಇದೇ ಸಂದರ್ಭದಲ್ಲಿ ದಲಿತ ಮುಖಂಡ ಶ್ರೀನಾಥ ಪೂಜಾರಿ ಮಾತನಾಡಿ, ಹೆಣ್ಣು ಮಕ್ಕಳು ಎಂದರೆ ಆ ದುಷ್ಕರ್ಮಿಗಳಿಗೆ ಆಟ ಆಡುವ ವಸ್ತುವಾಗಿದ್ದಾರೆ. ಯಾರು ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಮಾಡುತ್ತಾರೋ ಅಂಥವರನ್ನು ಗುರುತಿಸಿ ಅಂಥವರಿಗೆ ಕಠಿಣ ಶಿಕ್ಷೆಗೆ ಒಳಪಡಿಸಿದರೆ ಮುಂದಿನ ದಿನಗಳಲ್ಲಿ ಅತ್ಯಾಚಾರ ಮಾಡುವಂತಹ ಕೃತ್ಯಕ್ಕೆ ಹೋಗುವುದಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಕ್ರಮ್ ಮಾಶ್ಯಾಳಕರ, ಸಿ ಎ ಗಂಟಪ್ಪಗೋಳ, ಅಬ್ದುಲ್ ಖಾಧೀರ್, ರಾಜೇಶ್ವರಿ ಮಠಪತಿ, ಮೀನಾಕ್ಷಿ ಖಾಲಿಬಾಗ, ಶೋಭಾ ಗಾಯಕವಾಡ, ಯಲವ್ವ ಗಡೇಕರ, ಶಬೀರ್ ಕಾಗಜಕೋಟಿ, ಕುಸುಮಾ ಬಡಿಗೇರ, ಖತೀಜ ಹೆಬ್ಬಾಳ ಸೇರಿದಂತೆ ವಿವಿಧ ಸ್ಲಂ ಗಳಿಂದ, ಸ್ವ ಸಹಾಯ ಸಂಘಗಳ ಸದಸ್ಯರು ಭಾಗವಹಿಸಿದ್ದರು.

## ಮದುವೆ ಮಂಟಪದಲ್ಲಿ ಮತದಾನ ಜಾಗೃತಿ!



ಉದಯರಶ್ಮಿ ನ್ಯೂಸ್

ಇಂಡಿ: ತಾಲೂಕು ಸ್ವೀಪ್ ಸಮಿತಿ ವತಿಯಿಂದ ಗುರುವಾರ ಮತದಾನ ಜಾಗೃತಿ ಕುರಿತು ವಿನೂತನವಾಗಿ ಮಾಹಿತಿ ಪ್ರಚುರಪಡಿಸಿದರು.

ಇಂಡಿ ನಗರದ ಕಲ್ಯಾಣ ಮಂಟಪದಲ್ಲಿ ಜರುಗಿದ ಹಳ್ಳಿ ರವರ ಮದುವೆ ಸಮಾರಂಭದಲ್ಲಿ ತಾಲೂಕು ಸ್ವೀಪ್ ಸಮಿತಿಯ ಮತದಾರರ ಜಾಗೃತಿ ಕರ ಪತ್ರಗಳನ್ನು ವಧು–ವರರಿಗೆ ನೀಡಿ ಮದುವೆಗೆ ಆಗಮಿಸಿದ ಎಲ್ಲ ಜನರಿಗೆ ಮೇ 07, 2024 ರಂದು ಜರುಗುವ ಮತದಾನ ದಿನದಂದು ಪ್ರತಿಜ್ಞಾವಂತ ಮತದಾರರು ತಪ್ಪದೇ ಕಡ್ಡಾಯವಾಗಿ ತಮ್ಮ–ತಮ್ಮ ಮತಕೇಂದ್ರಗಳಿಗೆ ತೆರಳಿ ಮತದಾನ ಮಾಡಲು ಸ್ವೀಪ್ ಸಮಿತಿ ಸದಸ್ಯರು ವಿನಂತಿಸಿದರು.

ಈ ಸಂದರ್ಭದಲ್ಲಿ ಚುನಾವಣಾ ಆಯೋಗದ ನಿರ್ದೇಶನದಂತೆ ಮತಗಟ್ಟೆಗಳನ್ನು ಮದುವೆ ಮಂಟಪದಂತೆ ಶೃಂಗರಿಸಿ, ಮತದಾರರ ಹಿತದೃಷ್ಟಿಯಿಂದ ಮತದಾನ ಕೇಂದ್ರದಲ್ಲಿ ಕೈಗೊಂಡ ಅಗತ್ಯ ಮೂಲಭೂತ ಸೌಕರ್ಯ ಹಾಗೂ ಸೌಲಭ್ಯಗಳ ಸಾರ್ವಜನಿಕರಿಗೆ ಕುರಿತು ಮನವರಿಕೆ ಮಾಡಿಕೊಟ್ಟರು.

ಮತದಾರರಿಗೆ ಹೆಚ್ಚಿನ ಮಾಹಿತಿಗಾಗಿ ಕರಪತ್ರದಲ್ಲಿ ನೀಡಿದ ಮಾಹಿತಿಗಳು ಮತದಾರರ ಪಟ್ಟಿಯಲ್ಲಿ ಹೆಸರು ನೋಡಲು ವಿ.ಎಚ್.ಎ ಆಪ್, ಮತದಾರರ ಚೀಟಿ ಇಲ್ಲದಿದ್ದ ಪಕ್ಷದಲ್ಲಿ ಬೇಕಾದ ದಾಖಲೆಗಳು, ಸಹಾಯವಾಣಿ, ದೂರು ನಿರ್ವಹಣಾ ಸಂಖ್ಯೆ, ಸಿ–ವಿಜಿಲ್ ಹಾಗೂ ಮತದಾನ ಮಾಡಲು ಜಿಲ್ಲಾ ಸ್ವೀಪ್ ಸಮಿತಿಯವರ ಸಂದೇಶ ನೀಡುವ ಮೂಲಕ ವಿನೂತನವಾಗಿ ಮತದಾನ ಜಾಗೃತಿ ಮೂಡಿಸಿದರು.

ಮದುವೆ ಸಮಾರಂಭದಲ್ಲಿ 500ಕ್ಕೂ ಅಧಿಕ ಜನರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ತಾಲೂಕ ಸ್ವೀಪ್ ಸಮಿತಿ ಅಧ್ಯಕ್ಷರು ಇಒ ಕುಮಾರಿ ನಿಲಗಂಗಾ ಬಬಲಾದ, ಸಹಾಯಕ ನಿರ್ದೇಶಕರು ಗ್ರಾಮೀಣ ಉದ್ಯೋಗ ಸಂಜಯ್ ಕಡಗೇಕರ್, ಶ್ರೀಶೈಲ ಹಡಪದ, ಪಿಡಿಒ ಬಸವರಾಜ ಬಬಲಾದ, ಸಿ.ಜಿ.ಪಾರೆ, ತಾಲೂಕ ಪಂಚಾಯತಿ ತಾಂತ್ರಿಕ ಸಿಬ್ಬಂದಿ, ಎಲ್ಲ ಗ್ರಾಪಂಗಳ ಅಭಿವೃದ್ಧಿ ಅಧಿಕಾರಿಗಳು, ತಾಪಂ ಸಿಬ್ಬಂದಿ, ಗ್ರಾಪಂ ಸಿಬ್ಬಂದಿ ಇದ್ದರು.

## ದೇಶದ & ಹೆಣ್ಣುಮಕ್ಕಳ ರಕ್ಷಣೆಗಾಗಿ ಮೋದಿ ಪ್ರಧಾನಿಯಾಗಬೇಕು :ಯತ್ನಾಳ

ಉದಯರಶ್ಮಿ ನ್ಯೂಸ್

ಆಲಮೇಲ: ಹಿಂದೂಗಳ ಪುರಾತನ ಭಾರತ ದೇಶ ಭಾರತವಾಗಿ ಉಳಿಯಬೇಕು, ಹಿಂದುತ್ವ, ಹಿಂದೂಗಳ ರಕ್ಷಣೆಯಾಗಬೇಕು ಎಂದರೆ ನರೇಂದ್ರ ಮೋದಿಜಿ ಮತ್ತೆ ಪ್ರಧಾನಿ ಆದರೆ ಮಾತ್ರ ಸಾಧ್ಯ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಬುಧವಾರ ಸಂಜೆ ಲೋಕಸಭೆ ಚುನಾವಣೆ ನಿಮಿತ್ಯ ಪಟ್ಟಣದಲ್ಲಿ ರೋಡ್ ಶೋ ಮೂಲಕ ಮತಯಾಚನೆ ಮಾಡಿ ನಂತರ ಸಾರ್ವಜನಿಕರನ್ನು ಉದ್ದೇಶಿಸಿ ಅವರು ಮಾತನಾಡಿದರು.

ನರೇಂದ್ರ ಮೋದಿಯವರು ದೇಶಕ್ಕಾಗಿ, ಹಿಂದೂ ಧರ್ಮ ರಕ್ಷಣೆಗಾಗಿ ಹಗಲಿರುಳು ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಉಚಿತ ಯೋಜನೆಗಳು ಗ್ಯಾರೆಂಟಿಗಳು ನಂಬಬೇಡಿ, ದೇಶದ ರಕ್ಷಣೆ, ನಮ್ಮ ಮನೆಯ ಹೆಣ್ಣುಮಕ್ಕಳ ರಕ್ಷಣೆಗಾಗಿ ಮೋದಿ ಅವರ ಅವಶ್ಯಕತೆ ಇದೆ ಎಂದರು.



ಕಾಂಗ್ರೆಸ್ ಪಕ್ಷದವರು ಮುಸ್ಲಿಂ ಓಲೈಕೆಯಿಂದ ಈ ದೇಶದ ಬಹುಸಂಖ್ಯಾತ ಹಿಂದೂಗಳನ್ನು ಕಡೆಗಣಿಸುತ್ತಿದ್ದಾರೆ. ಅದಕ್ಕೆ ತಕ್ಕ ಉತ್ತರ ನೀಡುವ ಕಾಲ ಸದ್ಯ ಬಂದಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಹಿಂದೂಗಳ ಸಂಪತ್ತನ್ನು ಮುಸ್ಲಿಂರಿಗೆ ವಿತರಿಸುವ ಆಲೋಚನೆ ಇದೆ. ಅವ–ರಿಂದ ಹಿಂದೂಗಳ ರಕ್ಷಣೆ ಅಸಾಧ್ಯ. ಕಾರಣ ಯಾವುದೆ ಆಸೆ ಆಮಿಶಗಳಿಗೆ ಬಲಿಯಾಗದೆ ಬಿಜೆಪಿಗೆ ಮತ ನೀಡಿ ಎಂದರು.

ಲೋಕಸಭೆ ಚುನಾವಣೆ ಬಳಿಕ ರಾಜ್ಯ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುತ್ತೆ. ಆಗ ನಾನೇ ಮುಖ್ಯಮಂತ್ರಿ ಆಗುತ್ತೇನೆ. ರಾಜ್ಯದ ಎಲ್ಲ ಬಿಪಿಎಲ್ ಕುಟುಂಬಕ್ಕೆ ಪ್ರತಿ ತಿಂಗಳು ರೂ.5 ಸಾವಿರ ನೀಡುತ್ತೇನೆ ಎಂದರು.

ಬಿಜೆಪಿ ಅಭ್ಯರ್ಥಿ ರಮೇಶ ಜಿಗಜಿಣಗಿ, ಮಾಜಿ ಶಾಸಕ ರಮೇಶ ಭೂಸನೂರ ಮಾತನಾಡಿದರು.

ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮಲ್ಲಿಕಾರ್ಜುನ ಜೋಗೂರ, ಜಿ.ಪಂ ಮಾಜಿ ಸದಸ್ಯ ಬಿ.ಆರ್. ಎಂಟಮಾನ,ಜಿ.ಪಂ ಮಾಜಿ ಉಪಾಧ್ಯಕ್ಷ ಸಿದ್ದುಗೌಡ ಪಾಟೀಲ, ಶ್ರೀಮಂತ ನಾಗೂರ, ಸಿಂದಗಿ ಬಿಜೆಪಿ ಅಧ್ಯಕ್ಷ ಸಂತೋಷ ಪಾಟೀಲ ಡಂಬಳ, ಆಲಮೇಲದ ಅಧ್ಯಕ್ಷ ಅಶೋಕ ವಾರದ, ಪಿ.ಟಿ. ಪಾಟೀಲ, ಗುಂಡು ಮೇಲಿನಮನಿ, ಪ.ಪಂ ಸದಸ್ಯರಾದ ಹಣಮಂತ ಹೂಗಾರ, ಸಂಜುಕುಮಾರ ಎಂಟಮಾನ, ಶ್ರೀಶೈಲದಾದ ರಜಪೂತ, ಚಂದ್ರಶೇಖರ ಹಳೆಮನಿ, ವಿಶ್ವನಾಥ ಹಿರೇಮಠ, ಅಪ್ಪು ಶೆಟ್ಟಿ, ಹಣಮಂತ ಬೆಳ್ಳಿ, ಶಿವು ಗುರಕಾರ, ಗುರು ತಳವಾರ, ಅಮೃತ ಕೊಟ್ಟಲಗಿ, ಕಮಲಾಕರ ಪತ್ತಾರ, ರತನ ಒಣಕುದರಿ, ಮದನ ರಜಪೂತ, ಮಹಿಳಾ ಮುಖಂಡರಾದ ಮಂಗಲಾ ಗುಡಿ, ಗಂಗುಬಾಯಿ ಅಮಲಝರಿ ಮುಂತಾದವರು ಇದ್ದರು.

ಉದಯ ರಶ್ಮಿ

ಪ್ರತಿ ಮನೆ-ಮನದ ಸಂಗಾತಿ

### ಸಿಎಂ ಸಿದ್ಧರಾಮಯ್ಯ, ರಾಜ್ಯ ಉಸ್ತುವಾರಿ ರಂದೀಪಸಿಂಗ್ ಸುರ್ಜೆವಾಲಾ ಸಾಥ್ | ಖಚಿತವಾಗದ ಮಲ್ಲಿಕಾರ್ಜುನ ಖರ್ಗೆ ಆಗಮನ

# ಇಂದು ವಿಜಯಪುರದಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಮತಯಾಚನೆ

ಉದಯರಶ್ಮಿ ನ್ಯೂಸ್

ವಿಜಯಪುರ: ಕಾಂಗ್ರೆಸ್ ರಾಷ್ಟ್ರೀಯ ಮುಖಂಡ ರಾಹುಲ ಗಾಂಧಿ ಅವರು ಏ. 26 ರಂದು ಶುಕ್ರವಾರ ನಗರಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರು ಗುರುವಾರ ಬಿ.ಎಲ್.ಡಿ.ಇ ನ್ಯೂ ಕ್ಯಾಂಪಸ್ ಗೆ ಭೇಟಿ ನೀಡಿದರು.

ಸಂಸದ ಮತ್ತು ಎಐಸಿಸಿ ರಾಷ್ಟ್ರೀಯ ಮುಖಂಡ ರಾಹುಲ ಗಾಂಧಿ ಅವರು ವಿಜಯಪುರ ಕಾಂಗ್ರೆಸ್ ಅಭ್ಯರ್ಥಿ ಪ್ರೊ. ರಾಜು ಆಲಗೂರ ಪರ ಮತಯಾಚನೆ ಮಾಡಲಿದ್ದಾರೆ. ಈ ಹಿನ್ನೆಲೆಯಲ್ಲಿ ಕಾರ್ಯಕ್ರಮ ನಡೆಯಲಿರುವ ಸ್ಥಳದಲ್ಲಿ ಕೈಗೊಳ್ಳಲಾಗುತ್ತಿರುವ ಸಿದ್ಧತೆಗಳನ್ನು ಸಚಿವರು ಪರಿಶೀಲನೆ ನಡೆಸಿದರು.

ಬಿ.ಎಲ್.ಡಿ.ಇ ನ್ಯೂ ಕ್ಯಾಂಪಸ್ ನಲ್ಲಿ ಕಾರ್ಯಕ್ರಮಕ್ಕಾಗಿ ಬೃಹತ್ ವೇದಿಕೆ ನಿರ್ಮಿಸಲಾಗಿದ್ದು, ವಿಶಾಲವಾದ ಪೆಂಡಾಲ್ ಹಾಕಲಾಗಿದೆ. ಈ ವೇದಿಕೆ ಹಾಗೂ ಸಾರ್ವಜನಿಕರು ಆಸೀನರಾಗುವ ಸ್ಥಳದ ವೀಕ್ಷಣೆ ನಡೆಸಿದ ಸಚಿವರು ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಸಲು ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ತಮ್ಮನ್ನು ಭೇಟಿ ಮಾಡಿದ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಸಚಿವರು, ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ರಾಹುಲ ಗಾಂಧಿ ಪ್ರಚಾರ ಸಭೆಗೆ ಆಗಮಿಸಲಿದ್ದಾರೆ. ಸಿಎಂ ಎಸ್. ಸಿದ್ಧರಾಮಯ್ಯ, ರಾಜ್ಯ



ಕಾಂಗ್ರೆಸ್ ಉಸ್ತುವಾರಿ ರಂದೀಪಸಿಂಗ್ ಸುರ್ಜೆವಾಲಾ ಪಾಲ್ಗೊಳ್ಳುತ್ತಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಆಗಮಿಸುವುದು ಇನ್ನೂ ಖಚಿತವಾಗಿಲ್ಲ. ಅವರು ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಪ್ರಚಾರದಲ್ಲಿದ್ದಾರೆ. ಕಾಂಗ್ರೆಸ್ ರಾಷ್ಟ್ರೀಯ ನಾಯಕರು ದೇಶದ ಬೇರೆ ಬೇರೆ ಕಡೆ ಪ್ರತ್ಯೇಕವಾಗಿ ಪ್ರಚಾರ ನಡೆಸುತ್ತಿದ್ದಾರೆ. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲ ಸಚಿವರು, ಶಾಸಕರು, ಮಾಜಿ ಶಾಸಕರು, ಕಾಂಗ್ರೆಸ್ಸಿನ ಎಲ್ಲ ಮುಖಂಡರು ಉಪಸ್ಥಿತ–ರಿರಲಿದ್ದಾರೆ. ಈ ಕಾರ್ಯಕ್ರಮದಲ್ಲಿ ವಿಜಯಪುರ ಜಿಲ್ಲೆಯ ಎಲ್ಲ ಊರುಗಳಿಂದ 50 ಸಾವಿರಕ್ಕೂ ಹೆಚ್ಚು ಜನ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಭಾಗವಹಿಸಲಿದ್ದಾರೆ. ಎಲ್ಲರಿಗೂ ಆಸನದ ವ್ಯವಸ್ಥೆ ಮಾಡಲಾಗಿದೆ. ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಲಿದೆ ಎಂದು ತಿಳಿಸಿದರು.

2018ರ ಚುನಾವಣೆ ಸಂದರ್ಭದಲ್ಲಿ ಒಂದೇ ದಿನ ಸೋನಿಯಾ ಗಾಂಧಿ ಮತ್ತು ನರೇಂದ್ರ ಮೋದಿ ಅವರ ಕಾರ್ಯಕ್ರಮಗಳು ಜಿಲ್ಲೆಯಲ್ಲಿ ನಡೆದಿದ್ದವು. ಅಂದು ಪ್ರದಾನಿ ನರೇಂದ್ರ ಮೋದಿಯವರ ಕಾರ್ಯಕ್ರಮದ ಎರಡು ಪಟ್ಟು ಜನ ಸೋನಿಯಾ ಗಾಂಧಿಯವರ ಕಾರ್ಯಕ್ರಮಕ್ಕೆ ಬಂದಿದ್ದು ಇಂದಿಗೂ ಜನರು ಹೋಲಿಕೆ ಮಾಡಿ ಚರ್ಚಿಸುತ್ತಿರುತ್ತಾರೆ. ಶುಕ್ರವಾರ ನಡೆಯಲಿರುವ ಕಾರ್ಯಕ್ರಮದಲ್ಲಿ ರಾಹುಲ ಗಾಂಧಿ ಮತ್ತು ಸಿಎಂ ಎಸ್. ಸಿದ್ಧರಾಮಯ್ಯ ಕಾಂಗ್ರೆಸ್ ವಿಚಾರಗಳನ್ನು ಜನರೊಂದಿಗೆ ಹಂಚಿಕೊಳ್ಳಲಿದ್ದಾರೆ. ಜನರೂ ಕೂಡ ಈ ಕಾರ್ಯಕ್ರಮಕ್ಕೆ ಉತ್ಸುಕತೆಯಿಂದ ಕಾಯುತ್ತಿದ್ದಾರೆ. ಬಹಳ ಸಂಖ್ಯೆಯಲ್ಲಿ ಜನ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಈ ಸಂದರ್ಭದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಂ. ಎಸ್. ಲೋಣಿ, ಮುಖಂಡರಾದ ಅಬ್ದುಲ್ ಹಮೀದ್ ಮುಶ್ರಿಫ್, ಡಾ. ಬಾಬುರಾಜೇಂದ್ರ ನಾಯಕ, ಫಯಾಜ್ ಕಲಾದಗಿ ಮುಂತಾದವರು ಉಪಸ್ಥಿತರಿದ್ದರು.

# ಮುದ್ದೇಬಿಹಾಳದಲ್ಲಿ ಶರಣ ಬೆಳಗು



**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಪಟ್ಟಣದ ಸಂಗಮೇಶ್ವರ ನಗರದಲ್ಲಿ ಶರಣ ಬೆಳಗು ಕಾರ್ಯಕ್ರಮ ನೆರವೇರಿತು.

ಈ ವೇಳೆ ಕಾಶಿಬಾಯಿ ರಾಂಪೂರ, ಮಹಾದೇವಿ ಕಂಠಿ, ಸರೋಜಾ ಕುರಿ, ವಿಜಯಲಕ್ಷ್ಮಿ ಬಿದರಕುಂದಿ, ಅನ್ನಪೂರ್ಣ ಕಿತ್ತೂರ, ಬಸವರಾಜ ನಾಲತವಾಡ, ರುದ್ರೇಶ ಕಿತ್ತೂರ, ಬಾಪುಗೌಡ ಪಾಟೀಲ ಸೇರಿದಂತೆ ಮಹಾಮನೆ ಬಳಗದ ಸದಸ್ಯರು, ಕದಳಿ ಘಟಕದ ಸದಸ್ಯರು ಭಾಗಿಯಾಗಿದ್ದರು.

# ಈ ಬಾರಿ ಬದಲಾವಣೆಗಾಗಿ ಜನರ ಜತೆ ಕಾಂಗ್ರೆಸ್ ಶಪಥ :ಎಂ.ಬಿ.ಪಾಟೀಲ

**ಉದಯರಶ್ಮಿ ನ್ಯೂಸ್**

ವಿಜಯಪುರ: ಈ ಬಾರಿ ಲೋಕಸಭೆಯಲ್ಲಿ ಬದಲಾವಣೆ ತರಲೇಬೇಕೆಂದು ನಾವೆಲ್ಲ ಒಗ್ಗಟ್ಟಾಗಿ ನಿಂತಿದ್ದೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ನಾಗಠಾಣದಲ್ಲಿ ನಡೆದ ಬೃಹತ್ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

ಮುಂದಿನ ದಿನಗಳಲ್ಲಿ ನಾಗಠಾಣ ಭಾಗಕ್ಕೆ ಶಾಶ್ವತ ನೀರಿನ ಪರಿಹಾರಕ್ಕೆ ಕೆರೆ ತುಂಬಲಾಗುವುದು. ಈ ಕ್ಷೇತ್ರದಲ್ಲಿ ಹಿಂದೆ ತಾವು, ಶಿವಾನಂದ ಪಾಟೀಲ, ಆಲಗೂರರು



ಶಾಸಕರಾಗಿ ಕೆಲಸ ಮಾಡಿದ್ದೇವೆ. ಪಕ್ಕದ ಇಂಡಿ ಶಾಸಕರಿದ್ದಾರೆ. ಮಕಣಪುರ ಕೆರೆ ತುಂಬಿಸಿದ್ದೇವೆ. ಮುಂದೆಯೂ ನಿಮ್ಮೊಂದಿಗೆ ನಾವೆಲ್ಲ ಇರುತ್ತೇವೆ. ಆಲಗೂರರು ಸಂಸದರಾದರೆ ಆಲಮಟ್ಟಿ ಎತ್ತರ ಹೆಚ್ಚಿಸಲು ಸಂಸತ್‌ನಲ್ಲಿ ಹೋರಾಟ ಮಾಡಲಿದ್ದಾರೆ. ಆದಾದರೆ ಜಿಲ್ಲೆ ಸಂಪೂರ್ಣ ನೀರಾವರಿ ಆಗುತ್ತದೆ ಎಂದು ಭರವಸೆ ನೀಡಿದರು.

ಮೋದಿಯವರ ಮುಖ ನೋಡಿ ಓಟು ಹಾಕಿ ಎನ್ನುವವರಿಗೆ ಮೋದಿಯವರು ಏನು ಮಾಡಿದ್ದಾರೆ ಎಂದು ಕೇಳಿ. ಸಬ್ ಕಾ ಸಾಥ್ ಎಂದವರು ಜಗಳ ಹಚ್ಚಿದ್ದಾರೆ. ಇನ್ನೂ ಮುಂದೆ ಹೋಗಿ ಹೆಣ್ಣುಮಕ್ಕಳ ತಾಳಿಯ ಬಗ್ಗೆ ಮಾತನಾಡುವ ಮಟ್ಟಕ್ಕೆ ಹೋಗಿದ್ದಾರೆ. ಚುನಾವಣಾ ಬಾಂಡ್‌ನಿಂದ ಇವರ ಬಂಡವಾಳ ಬಯಲಾಗಿದೆ. ಸ್ವಚ್ಛ ಸ್ವಚ್ಛ ಎಂದವರ ದೇಶದ ದೊಡ್ಡ ಹಗರಣ ಇದಾಗಿದೆ. ಯುವಕರಿಗೆ ಉದ್ಯೋಗ ಸಿಗಲಿಲ್ಲ. ಹೇಳಿದಂತೆ ನಡೆದುಕೊಳ್ಳಲಿಲ್ಲ. ಉದ್ಯಮಿಗಳ ಆದರೆ ದೇಶವನ್ನು ಕಟ್ಟಿದ್ದು ಕಾಂಗ್ರೆಸ್ ಪಕ್ಷ ಎಂದರು.

ಕೃಷ್ಣಾ ತೀರ್ಪಿನ ಸದ್ಬಳಕೆಯಾಗಲು ನಮ್ಮ ಸರಕಾರ, ನಮ್ಮ ಎಂಪಿ ಬೇಕು. ಜಿಲ್ಲೆ ಪರಿಪೂರ್ಣ ನೀರಾವರಿಯಾಗುತ್ತದೆ ಎಂದರು.

ಸಕ್ಕರೆ ಸಚಿವ ಶಿವಾನಂದ ಪಾಟೀಲ ಮಾತನಾಡಿ, ನೀವು ನಮ್ಮನ್ನು ಪ್ರಶ್ನೆ ಮಾಡಿದಂತೆ ಜಿಗಜಿಣಗಿಯವರಿಗೆ ಕೇಳುವುದು ಆಗಲ್ಲ. ಅವರು ಸಿಗುವುದೇ ಇಲ್ಲ. ಹಾಲು ನೀಡದ ಹಸುವನ್ನೇ ಇಟ್ಟುಕೊಳ್ಳಲ್ಲ, ಇನ್ನು ಕೆಲಸ ಮಾಡದ ಸಂಸದ ಜಿಗಜಿಣಗಿ ಯಾಕೆ ಬೇಕು. ಐವತ್ತು ವರ್ಷ ಅಧಿಕಾರ ಅನುಭವಿಸಿದ ಅವರಿಂದ ನಯಾಪೈಸೆ ಕೆಲಸ ಮಾಡಿಲ್ಲ ಎಂದು ಕೇಳಿದರು.

ರಾಜು ಆಲಗೂರ ಇಲ್ಲಿನ ವಿಧಾನಸಭೆ ಕ್ಷೇತ್ರ ಬಿಟ್ಟು ಸಂಸತ್‌ಗೆ ನಿಂತಿದ್ದಾರೆ. ಅವರೊಬ್ಬ ಪ್ರೊಫೆಸರ್ ಆಗಿದ್ದು ಸಂಸತ್‌ನಲ್ಲಿ ಚೆನ್ನಾಗಿ ಮಾತನಾಡಲಿದ್ದಾರೆ. ನಿಮಗೆ ದನಿಯಾಗಲಿದ್ದಾರೆ. ಯುಕೆಪಿ ಕೆಲಸ ಕೈಗೂಡಲಿದೆ. ಬೇರೆಯವರ ಕೆಲಸ ತಾನು ಮಾಡೀನಿ ಎನ್ನುವ ಜಿಗಜಿಣಗಿಯವರು ಬೇಕೋ ಕಾಂಗ್ರೆಸ್ ಬೇಕೊ ನೀವೇ ನಿರ್ಧರಿಸಿ. ಆರು ಜನ ಹೆಣ್ಣುಮಕ್ಕಳಿಗೆ ರಾಜ್ಯದಲ್ಲಿ ಹಾಗೂ ದೇಶದಲ್ಲಿ ಎಂಭತ್ತು ಜನರಿಗೆ ಕಾಂಗ್ರೆಸ್ ಟಿಕೆಟ್ ನೀಡಿ ಮಹಿಳೆಯರ ನಮ್ಮ ನಿಲುವು ತೋರಿದ್ದೇವೆ. ಅದೇ ಬಿಜೆಪಿ ಕೇವಲ ಒಬ್ಬರಿಗೆ ಲೋಕಸಭೆ ಟಿಕೆಟ್ ನೀಡಿದೆ. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಸಾಲ ಮನ್ನಾ, ಹೆಣ್ಣುಮಕ್ಕಳಿಗೆ ತಿಂಗಳಿಗೆ ಹತ್ತು ಸಾವಿರ ರೂ. ಬರುತ್ತದೆ ಎಂದು ಹೇಳಿದರು.

ದೇಶದಲ್ಲೇ ಅತಿ ಹೆಚ್ಚು ತೆರಿಗೆ ಕಟ್ಟುವ ರಾಜ್ಯವಾದ ನಮಗೆ ಬರ ಪರಿಹಾರ, ಜಿಎಸ್‌ಟಿ ಪಾಲು ಸಿಗಲಿಲ್ಲ. ಈ ದುರ್ಭಾಗ್ಯಕ್ಕೆ ನಮಗೆ ಮೋದಿಯವರು ಬೇಕಾ ಎಂದು ಕೇಳಿದರು.

ಶಾಸಕ ವಿಠ್ಠಲ ಕಟಕದೊಂಡ ಮಾತನಾಡಿ, ನನಗೆ ನೀಡಿದ್ದಕ್ಕಿಂತ ಹೆಚ್ಚು ಮತವನ್ನು ಆಲಗೂರರಿಗೆ ನೀಡಿ ಎಂದು ಮನವಿ ಮಾಡಿದರು.

ಯಶವಂತರಾಯಗೌಡ ಪಾಟೀಲ ಮಾತನಾಡಿ, ನಾಗಠಾಣ ಗಂಡುಮೆಟ್ಟಿದ ನೆಲವಾಗಿದೆ. ಇಲ್ಲಿನವರೇ ಆದ ಆಲಗೂರರಿಗೆ ಸಂಸತ್‌ನಲ್ಲಿ ಧ್ವನಿಯಾಗುವ ಶಕ್ತಿ, ಸಾಮರ್ಥ್ಯವಿದೆ. ಮೋದಿಯವರ ವೈಫಲ್ಯ ದೇಶಕ್ಕೀಗ ಗೊತ್ತಾಗುತ್ತಿದೆ. ಕಾಂಗ್ರೆಸ್‌ಗೆ ಮರು ಶಕ್ತಿ ನೀಡಿ. ಜಿಲ್ಲೆಯಲ್ಲಿ ಲಕ್ಷ ಮತಗಳಿಂದ ಗೆಲ್ಲುವ ಒಳ್ಳೆಯ ವಾತಾವರಣವಿದೆ. ಆ ದಾಖಲೆಯನ್ನು ನೀವು ಮಾಡಿ. ಜಿಲ್ಲೆಯ ಪ್ರವಾಸೋದ್ಯಮ ಪ್ರಗತಿಯಾಗಬೇಕು, ಬರಗಾಲಕ್ಕೆ ನೆರವು ಬೇಕಿದೆ. ರಾಜ್ಯಗಳ ಹಿತವನ್ನು ಮೋದಿ ಕಾಯ್ದುಕೊಳ್ಳುತ್ತಿಲ್ಲ. ಅವರಿಗೆ ಆತ್ಮಸಾಕ್ಷಿ, ಮತ ಕೇಳುವ ನೈತಿಕತೆಯೇ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಮಾತನಾಡಿ, ಬಿಜೆಪಿ ಸಂಸದ ಜಿಗಜಿಣಗಿಯವರು ಅಭಿವೃದ್ಧಿ ಕೆಲಸ ಮಾಡುವುದು ಬಿಡಿ, ಒಂದು ದೇವರಿಗೆ ಪಟ್ಟಿ ಕೂಡ ಕೊಟ್ಟಿಲ್ಲ. ಸಮೀಪದ ಮಕಣಾಪುರವನ್ನು ಅವರು ದತ್ತು ತೆಗೆದುಕೊಂಡಿದ್ದರು. ಅಲ್ಲಿಯ ದೇವಸ್ಥಾನಕ್ಕೆ ದ್ವಾರ ಬಾಗಿಲು ಮಾಡಲಾಗಿಲ್ಲ. ನನಗೆ ಬೇಡ ಮೋದಿಯವರ ಮಾರಿ ನೋಡಿ ಮತ ಹಾಕಿ ಅಂತ ಈಗ ಬರುತ್ತಿದ್ದಾರೆ ಎಂದು ಹೇಳಿದರು.

ವಿಜಯಪುರದಿಂದ ಸರಿಯಾದ ರೈಲು ವ್ಯವಸ್ಥೆ ಇಲ್ಲ. ತೋಟಗಾರಿಕೆ ಇದ್ದರೂ ಅದಕಕ್ಕೆ ಬೆಲೆ ಸಿಗಲಿಲ್ಲ. ಇದೆಲ್ಲ ಸರಿಯಾಗಬೇಕಾದರೆ ವಿದ್ಯಾವಂತರಾದ ರಾಜು ಆಲಗೂರರನ್ನು ಬೆಂಬಲಿಸಿ. ಕ್ಷೇತ್ರದ ಅಭಿವೃದ್ಧಿಗೆ ಕಾಂಗ್ರೆಸ್‌ಗೆ ಮತ ಹಾಕಿ ನಾಗಠಾಣದಲ್ಲಿ ಬಹುಮತ ನೀಡಿ ಎಂದರು.

ಅಭ್ಯರ್ಥಿ ಪ್ರೊ.ರಾಜು ಆಲಗೂರ ಅವರು ಮಾತನಾಡಿ, ರೈತರು ಬರಗಾಲದಿಂದ ತತ್ತರಿಸಿದರೂ ಕೇಂದ್ರ ಸರ್ಕಾರ ನೆರವಿಗೆ ಬರಲಿಲ್ಲ. ಸುಪ್ರೀಂ ಕೋರ್ಟ್ ಮೊರೆ ಹೋದಾಗ ಅದು ತಾಕೀತು ಮಾಡಿದಾಗ ಪರಿಹಾರ ನೀಡುವ ಪ್ರಸಂಗ ಬಂದಿದೆ. ಆದರೆ ಇನ್ನೊಂದು ಕಡೆ ಕಾಂಗ್ರೆಸ್ ರಾಜ್ಯದಲ್ಲಿ ಜನಾನುರಾಗಿಯಾಗಿ ಕೆಲಸ ಮಾಡಿದೆ. ಕಳೆದ ಹತ್ತು ವರ್ಷಗಳಲ್ಲಿ ಬರೀ ವೈಫಲ್ಯ ಕಂಡಿದೆ. ಕಾಂಗ್ರೆಸ್‌ಗೆ ಈ ಸಲ ಅಧಿಕಾರ ನೀಡಿದರೆ ಸಾಲ ಮನ್ನಾ ಮಾಡಲಾಗುತ್ತದೆ. ದೇಶದಲ್ಲೂ ಗ್ಯಾರಂಟಿ ಪರ್ವ ಆರಂಭವಾಗಲಿದೆ. ತಮಗೆ ಮತ ನೀಡಿದರೆ ನಿಮ್ಮ ವಿಶ್ವಾಸ ಉಳಿಸಿಕೊಳ್ಳುವೆ ಎಂದು ಹೇಳಿದರು.

ಪಕ್ಷದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಲೋಣಿ ಮಾತನಾಡಿ, ಜಿಲ್ಲೆಯಲ್ಲಿ ಪಕ್ಷ ಒಗ್ಗಟ್ಟಿನಿಂದ ಹೋರಾಟ ಮಾಡುತ್ತಿದೆ. ಈ ಲೋಕಸಭೆ ಚುನಾವಣೆ ಹಲವು ತಿರುವು ನೀಡಲಿದೆ. ದೇಶದಲ್ಲಿ ಬದಲಾವಣೆ ಗಾಳಿ ಬೀಸಿದೆ. ಬಿಜೆಪಿ ಸುಳ್ಳು ಹೇಳಿ ಅಧಿಕಾರ ಹಿಡಿದಿದೆ ಎಂದರು.

ಕೌಶಲ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯಕ, ಲಂಬಾಣಿಗರಿಗೆ ರಮೇಶ ಜಿಗಜಿಣಗಿ ಅವಮಾನ ಮಾಡಿದೆ. ನಾವು ಬಿಜೆಪಿಗೆ ಮತ ಹಾಕಬಾರದು. ಜಿಗಜಿಣಗಿ ಹಠವೋ ತಾಂಡಾ ಬಚಾವೋ ಆಂದೋಲನ ಮಾಡುತ್ತಿದ್ದೇವೆ ಎಂದರು.

ಇದೇ ಸಂದರ್ಭ ಮಾಜಿ ಜಿಪಂ ಸದಸ್ಯ ದಾನಪ್ಪ ಕಟ್ಟಿಮನಿ ಸೇರಿದಂತೆ ಅನೇಕರು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದರು.

ವೀಕ್ಷಕರಾದ ಡಾ.ಸಯೀದ್ ಬುರಾನ, ಮುಖಂಡರಾದ ಡಿ.ಎಲ್.ಚವ್ಹಾಣ, ಎಂ.ಆರ್.ಪಾಟೀಲ, ಶ್ರೀದೇವಿ ಉತ್ಲಾಸರ, ಸುಜಾತಾ ಕಳ್ಳಿಮನಿ, ಬಾಬು ರಾಜೇಂದ್ರ ನಾಯಕ, ಆರ್‌ಡಿ.ಹಕ್ಕೆ, ಶಹನವಾಜ ಮುಲ್ಲಾ, ಸೋಮನಾಥ ಕಳ್ಳಿಮನಿ, ಸುರೇಶ ಗೊಣಸಗಿ, ಹೊನಮಲ್ಲ ಸಾರವಾಡ, ರಾಮನಮಗೌಡ ಪಾಟೀಲ, ತುಕಾರಾಮ ಘೋರ್ಪಡೆ, ಶಫೀಕ ಮನಗೂಳಿ, ಶ್ರೀಮಂತ ಇಂಡಿ, ರಘುನಾಥ ಜಾಧವ ಅನೇಕರಿದ್ದರು.


## ಅಬ್ ಕಿ ಬಾರ್ ಮೋದಿ ದೋಸೊ ಪಾರ್ ಕೂಡ ಆಗಲ್ಲ!

ಅಬ್ ಕಿ ಬಾರ್ ಚಾರ್ ಸೌ ಪಾರ್ ಅನ್ನುತ್ತಿರುವ ಮೋದಿಯವರಿಗೆ ಈ ಸಲ ಜನ ಬುದ್ಧಿ ಕಲಿಸಿ ದೋಸೌ ಪಾರ್ ಕೂಡ ಆಗಲು ಬಿಡಲ್ಲ ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು.

ಮೋದಿ ದಯೆಯಿಂದ ಬಂಗಾರದ ಬೆಲೆ ಗಗನ ಮುಟ್ಟಿದೆ. ತಾಳಿ ಬಗ್ಗೆ ಮಾತನಾಡುವ ಅವರಿಂದ ಇನ್ನು ಮೇಲೆ ಹೆಣ್ಣುಮಕ್ಕಳು ಕಬ್ಬಿಣದ ತಾಳಿಯನ್ನೇ ಕಟ್ಟಿಕೊಳ್ಳಬೇಕಾಗುತ್ತದೆ ಎಂದು ಹೇಳುತ್ತಿದ್ದಂತೆ ಸಭೆ ನಡೆಯುತ್ತಿದ್ದ ಪಕ್ಕದ ಮನೆ ಮುಂದೆ ಕುಳಿತಿದ್ದ ಹೆಣ್ಣುಮಕ್ಕಳು ಇವರ ಮಾತಿಗೆ ದನಿಗೂಡಿಸಿ, 'ಹೌದ್ರಿ ಸರ್.. ಮೋದಿಯವ್ರು ಬಂದ ಮ್ಯಾಲ ನಮ್ ಜೀವ್ನಾ ಸಾಕಾಗ್ಯಾದ.. ನಮ್ ಮಕ್ಳೀಗಿ ನೌಕ್ರಿ ಇಲ್ಲ, ನಮಗ ಎಲ್ಲಾ ತುಟ್ಟಿಯಾಗ್ಯಾದ..' ಎಂದು ಎದ್ದು ನಿಂತು ಹೇಳಿದರು. 'ಹೌದಮ್ಮ ದೇಶದ ಜನಕ್ಕ ಇವರ ಬಗ್ಗೆ ಗೊತ್ತಾಗ್ಯಾದ' ಎಂದು ಸಚಿವ ಪಾಟೀಲ್ ಹೇಳಿದರು.

# ಹಾಲುಮತದ ನಡಿಗೆ ಸಿದ್ದರಾಮಯ್ಯನ ಕಡೆಗೆ :ರವಳಿ

**ಉದಯರಶ್ಮಿ ನ್ಯೂಸ್**



ಇಂಡಿ: ಭಾರತೀಯ ಜನತಾ ಪಕ್ಷದಿಂದ ಹಾಲುಮತ ಸಮುದಾಯಕ್ಕೆ ಸಿಕ್ಕಿದ್ದು ಏನು..? ರಾಜ್ಯದಲ್ಲಿ ನಿರ್ಣಾಯಕ ಮತ ಹೊಂದಿರುವ ಹಾಲುಮತ ಸಮುದಾಯಕ್ಕೆ ರಾಜ್ಯದಲ್ಲಿ ಒಂದೇ ಒಂದು ಕ್ಷೇತ್ರದಲ್ಲಿ ಅವಕಾಶ ನೀಡಿಲ್ಲ. ಇನ್ನು ಚಡ್ಡಿ ಹಾಕಿ ಬಿಜೆಪಿ ಪಕ್ಷ ಕಟ್ಟುವಲ್ಲಿ ಶ್ರಮಿಸಿದ ನಮ್ಮ ಸಮುದಾಯದ ನಾಯಕ ಕೆ ಎಸ್ ಈಶ್ವರಪ್ಪರನ್ನು ವಿಧಾನ ಸಭೆಯಲ್ಲೂ ಟಿಕೆಟ್ ನೀಡದೆ, ಲೋಕಸಭೆಯಲ್ಲೂ ಟಿಕೆಟ್ ನೀಡದೆ, ಪಕ್ಷದಿಂದ 6 ವರ್ಷಗಳ ಕಾಲ ಉಚ್ಚಾಟನೆ ಮಾಡಿದ್ದು, ಹಾಲುಮತ ಸಮಾಜ ಖಂಡಿಸುತ್ತದೆ. ಹಾಗಾಗಿ ಬಿಜೆಪಿ ಪಕ್ಷಕ್ಕೆ ಹಾಲುಮತ ಸಮುದಾಯದಿಂದ ಒಂದೇ ಒಂದು ಮತ ನೀಡಬಾರದು ಎಂದು ಹಾಲುಮತ ಸಮಾಜದ ತಾಲ್ಲೂಕು ಅಧ್ಯಕ್ಷ ಜೆಟ್ಟಪ್ಪ ರವಳಿ ಹೇಳಿದರು.

ಬುಧವಾರ ಪಟ್ಟಣದ ಖಾಸಗಿ ಹೊಟೆಲ್ ಯೊಂದರಲ್ಲಿ ಕರೆದ ಸುದ್ದಿಗೊಷ್ಠಿ ಉದ್ದೇಶಿಸಿ ಮಾತನಾಡಿದ ಅವರು, 2024 ರ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಹಾಲುಮತದ ನಡೆ ಸಿದ್ದರಾಮಯ್ಯ ಕಡೆ ಎಂದು ಹೇಳಿದರು.

ಕಾಂಗ್ರೆಸ್ ಹಾಲುಮತ ಸಮುದಾಯಕ್ಕೆ ಮುಖ್ಯಮಂತ್ರಿ ಭಾಗ್ಯ ಕೊಟ್ಟಿದೆ. ಒಂದು ಬಾರಿ ಅಲ್ಲಾ ಎರಡನೇ ಬಾರಿ ಅವಕಾಶ ಕೊಟ್ಟಿದೆ. ಆದರೆ ಬಿಜೆಪಿ ಪಕ್ಷದಿಂದ ಸಿಕ್ಕಿದ್ದು ಸುಳ್ಳು ಭರವಸೆ, ಮೋಸ ಹಾಗೂ ಕೋಮುವಾದ, ಇವರ ಕೊಡುಗೆ ಶೂನ್ಯ ಎಂದು ಕಿಡಿಕಾರಿದರು.

ಇದೆ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಮಾಜಿ ಸದಸ್ಯ ಗುರನಗೌಡ ಪಾಟೀಲ, ಬಿಸೆ ಸಾಹುಕಾರ್, ತುಕರಾಮ ಪೂಜಾರಿ ಮಾತನಾಡಿದ ಅವರು, 135 ಕೋಟಿ ಜನರ ಆಶೋತ್ತರಗಳಿಗೆ ಕಾಂಗ್ರೆಸ್ ಪಕ್ಷ ಅತ್ಯಂತ ಮಹತ್ವದಾಗಿದ್ದೆ. ಅದಲ್ಲದೇ ಗ್ಯಾರೆಂಟಿ ಸರಕಾರದ ಸರದಾರ ಸಿದ್ದರಾಮಯ್ಯ, ಸಾಮಾಜಿಕ ಅಡಿಯಲ್ಲಿ ನ್ಯಾಯ ಒದಗಿಸುವ ಕಾಂಗ್ರೆಸ್ ಪಕ್ಷವಿದೆ. ಆದರೆ ರಾಜಕೀಯ ಷಢ್ಯಂತ್ರದಿಂದ ಹಾಲುಮತ ಸಮುದಾಯಕ್ಕೆ ಮೂಲೆಗುಂಪು ಮಾಡುತ್ತಿರುವ ಬಿಜೆಪಿ ಪಕ್ಷಕ್ಕೆ ರಾಜ್ಯಾದಾದ್ಯಂತ ಹಾಲುಮತ ಸಮುದಾಯ ಒಂದೇ ಒಂದು ಮತ ಕೊಡದೇ ಒಳ್ಳೆಯ ಪಾಠ ಕಲಿಸುತ್ತಾರೆ ಎಂದು ಹೇಳಿದರು.

ಗ್ರಾ.ಪಂ ಅಧ್ಯಕ್ಷ ಬಸವರಾಜ ಕಿವಡೆ, ಮಲ್ಲು, ಗ್ರಾ.ಪಂ ಮಾಜಿ ಅಧ್ಯಕ್ಷ ಭೀರಪ್ಪ ಪೂಜಾರಿ ಸೇರಿದಂತೆ ಅನೇಕರಿದ್ದರು.

# ಕರಾಮುವಿಯಿಂದ ಉಚಿತ ಕೆಎಎಸ್ ತರಬೇತಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕರ್ನಾಟಕ ಲೋಕ ಸೇವಾ ಆಯೋಗದವರು ನಡೆಸಲಿರುವ ಕೆಎಎಸ್ ಹಾಗು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಮೈಸೂರಿನ ಕರಾಮುವಿ ಕೇಂದ್ರ ಕಚೇರಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಆಸಕ್ತರು ಏಪ್ರೀಲ್ 30 ರೊಳಗಾಗಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು 0821-2515944 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಕರಾಮುವಿ ವಿಜಯಪುರದ ಪ್ರಾದೇಶಿಕ ನಿರ್ದೇಶಕರಾದ ಡಿ.ಎಸ್. ಮೈತ್ರಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಏ.30 ರಂದು ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಲೋಕಸಭೆ ಸಾರ್ವತ್ರಿಕ ಚುನಾವಣೆ-2024ರ ಸಲುವಾಗಿ ಪ್ರಿಸೈಡಿಂಗ್, ಸಹಾಯಕ ಪ್ರಿಸೈಡಿಂಗ್ ಮತ್ತು ಪೋಲಿಂಗ್ ಅಧಿಕಾರಿಗಳಿಗೆ ಏಪ್ರಿಲ್ 30 ರಂದು ಬೆಳಗ್ಗೆ 9.30 ರಿಂದ ತರಬೇತಿ ಏರ್ಪಡಿಸಲಾಗಿದೆ.

ಮುದ್ದೇಬಿಹಾಳ ಮತಕ್ಷೇತ್ರ ಸಂಬಂಧಿಸಿದ ಮತಗಟ್ಟೆ ಅಧಿಕಾರಿಗಳಿಗೆ ಮುದ್ದೇಬಿಹಾಳ ಎಮ್.ಜಿ.ವಿ.ಸಿ ಕಾಲೇಜು ನಲ್ಲಿ, ದೇವರ ಹಿಪ್ಪರಗಿ ಕ್ಷೇತ್ರದ ಅಧಿಕಾರಿಗಳಿಗೆ ದೇವರ ಹಿಪ್ಪರಗಿ ಶ್ರೀ ಸಿದ್ದೇಶ್ವರ ಸ್ವಾಮೀಜಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆ, ಬಸವನ ಬಾಗೇವಾಡಿ ಮತಕ್ಷೇತ್ರಕ್ಕೇ ಬಸವನ ಬಾಗೇವಾಡಿ ಬಸವೇಶ್ವರ ಪಿಯು ಕಾಲೇಜು , ಬಬಲೇಶ್ವರ ಮತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಬಲೇಶ್ವರ ಶಾಂತವೀರ ಪ್ರೌಡಶಾಲೆ ಮತ್ತು ಪಿ ಯು ಕಾಲೇಜು, ವಿಜಯಪುರ ನಗರ ಮತ ಕೆತ್ರದ ಅಧಿಕಾರಿಗಳಿಗೆ ವಿ ವಿ ದರಬಾರ ಪ್ರೌಡ ಶಾಲೆ ಹಾಗೂ ಪಿಯು ಕಾಲೇಜು, ವಿಜಯಪುರನಲ್ಲಿ, ನಾಗಠಾಣ ಮತಕ್ಷೇತ್ರಕ್ಕೆ ಪಿಡಿಜೆ ಪ್ರೌಢ ಶಾಲೆ ವಿಜಯಪುರ, ಇಂಡಿ ಮತಕ್ಷೇತ್ರಕ್ಕೆ ಇಂಡಿ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ, ಸಿಂದಗಿ ಮತಕ್ಷೇತ್ರದ ಅಧಿಕಾರಿಗಳಿಗೆ ಸಿಂದಗಿ ಆರ್ ಡಿ. ಪಾಟೀಲ್ ಹಾಗೂ ಜೆ ಪಿ ಪೊರವಾಲ್ ಕಾಲೇಜಿನಲ್ಲಿ ತರಬೇತಿ ಹಮ್ಮಿಕೊಳ್ಳಲಾಗಿದೆ.

ಚುನಾವಣೆ ಕರ್ತವ್ಯಕ್ಕೆ ನಿಯೋಜನೆಗೊಂಡ ಪ್ರಿಸೈಡಿಂಗ್, ಸಹಾಯಕ ಪ್ರಿಸೈಡಿಂಗ್ ಹಾಗೂ ಪೋಲಿಂಗ್ ಅಧಿಕಾರಿಗಳು ತರಬೇತಿಗೆ ಕಡ್ಡಾಯವಾಗಿ ಹಾಜರು ಇರಬೇಕು ಎಂದು ಚುನಾವಣೆ ಅಧಿಕಾರಿಯೂ ಆದ ಜಿಲ್ಲಾಧಿಕಾರಿ ಟಿ. ಭೂಬಾಲನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಉದಯರಶ್ಮಿ ದಿನಪತ್ರಿಕೆ**

# ಇತರರಿಗೆ ಮಾಡುವ ಸಹಾಯ ಸ್ವಾರ್ಥರಹಿತವಾಗಿರಲಿ


ಹಸ್ತಿನಾಪುರದ ಯುವರಾಜನಾದ ದುರ್ಯೋಧನನು ದುರಾಸೆಯಿಂದ ಪಾಂಡುವಿನ ಪುತ್ರರಾದ ಪಾಂಡವರನ್ನು ಇಂದ್ರಪ್ರಸ್ಥ ಅರಮನೆಯಿಂದ ಓಡಿಸಿ ಅವರ ಆಸ್ತಿಯನ್ನೂ ಕಬಳಿಸುವ ಉದ್ದೇಶದಿಂದ ಮಾವ ಶಕುನಿಯ ಕುತಂತ್ರದಂತೆ ಹಸ್ತಿನಾವತಿಗೆ ಪಗಡೆಯಾಟಕ್ಕೆ ಆಹ್ವಾನಿಸುತ್ತಾನೆ. ಶಕುನಿಯ ಹೆಣೆದ ಕುತಂತ್ರದಿಂದ ಧರ್ಮರಾಯನು ಪಗಡೆಯಾಟದಲ್ಲಿ ಸೋತು, ತಾನು ಗಳಿಸಿದ ಅಷ್ಟೂ ಸಂಪತ್ತು, ಗಳಿಸಿದ್ದ ಆಸ್ತಿ, ತನ್ನ ಸೈನ್ಯ, ಸಾವಿರಾರು ಕುದುರೆಗಳನ್ನು ಕಳೆದುಕೊಳ್ಳುತ್ತಾನೆ. ನಂತರದಲ್ಲಿ ಇಂದ್ರಪ್ರಸ್ಥ ಅರಮನೆ, ಸಹೋದರರಾದ ನಕುಲ, ಸಹದೇವ, ಅರ್ಜುನ, ಭೀಮ ಕೊನೆಗೆ ತನ್ನನ್ನೇ ತಾನು ಪಂದ್ಯಕ್ಕಿಟ್ಟು ಯುಧಿಷ್ಠಿರನು ಎಲ್ಲವನ್ನೂ ಕಳೆದುಕೊಳ್ಳುತ್ತಾನೆ. ಪಗಡೆಯಾಟದಲ್ಲಿ ಕೊನೆಯದಾಗಿ ತನ್ನ ಮಡದಿ ದ್ರೌಪದಿಯನ್ನೂ ಪಂದ್ಯಕ್ಕೆ ಇಟ್ಟು ಆಕೆಯನ್ನೂ ಪಂದ್ಯದಲ್ಲಿ ಕಳೆದುಕೊಂಡು ಪಾಂಡವರು ಕೌರವನ ದಾಸನಾಗುತ್ತಾರೆ.



– ಸಂತೋಷ್ ರಾವ್ ಪೆರ್ಮುಡ,
ಪೆರ್ಮುಡ ಮನೆ, ಪಟ್ರಮೆ ಗ್ರಾಮ
ಮತ್ತು ಅಂಚೆ ಬೆಳ್ತಂಗಡಿ ತಾಲೂಕು,

ದ್ರೌಪದಿಯ ಮೇಲಿದ್ದ ದ್ವೇಷದ ಕಾರಣದಿಂದ ತನ್ನ ತಮ್ಮನಾದ ದುಶ್ಯಾಸನನಲ್ಲಿ ದ್ರೌಪದಿಯನ್ನು ತುಂಬಿದ ರಾಜ ಸಭೆಗೆ ಎಳೆದು ತರುವಂತೆ ಆದೇಶಿಸುತ್ತಾನೆ. ಅಣ್ಣನ ಆದೇಶದಂತೆ ದುಶ್ಯಾಸನನು ದ್ರೌಪದಿಯನ್ನು ರಾಜಸಭೆಗೆ ದರದರನೆ ಎಳೆದುಕೊಂಡು ಬರುತ್ತಾನೆ. ಧುರ್ಯೋಧನನ ಆದೇಶದಂತೆ ದುಶ್ಯಾಸನನು ದ್ರೌಪದಿಯ ವಸ್ತ್ರವನ್ನು ಎಳೆದು ವಿವಸ್ತ್ರಗೊಳಿಸಲು ಪ್ರಯತ್ನಿಸುತ್ತಾನೆ. ಅದಾಗಲೇ ಕೌರವನ ದಾಸರಾಗಿದ್ದ ತನ್ನ ಐವರು ಗಂಡಂದಿರು ಅಸಹಾಯಕರಾಗಿರುವುದನ್ನು ನೋಡಿ ದುಖಿಃತಳಾದ ದ್ರೌಪದಿಯು ಅಂತಿಮವಾಗಿ ಶ್ರೀಕೃಷ್ಣನನ್ನು ಮನತುಂಬಿ ಪ್ರಾರ್ಥಿಸುತ್ತಾಳೆ. ದ್ರುಪದ ಕನ್ಯೆಯ ಪ್ರಾರ್ಥನೆಗೆ ಓಗೊಟ್ಟ ಶ್ರೀಕೃಷ್ಣನು ದ್ರೌಪದಿಯ ಸೀರೆಯನ್ನು ಅಕ್ಷಯವಾಗಿಸುತ್ತಾನೆ. ದುಶ್ಯಾಸನನು ಸೀರೆಯನ್ನು ಎಳೆದು ಎಳೆದು ಸುಸ್ತಾಗಿ ತುಂಬಿದ ರಾಜಸಭೆಯಲ್ಲಿ ಬೀಳುತ್ತಾನೆ.





ದ್ವಾರಕಿಯಲ್ಲಿ ಶಿಶುಪಾಲನೊಂದಿಗಿನ ಯುದ್ಧದಲ್ಲಿ ಕೃಷ್ಣನ ಕೈಯ ಬೆರಳಿಗೆ ಗಾಯವಾದಾಗ ದ್ರೌಪದಿಯು ಕೃಷ್ಣನ ಕೈಯ ಗಾಯವನ್ನು ಶುಚಿಗೊಳಿಸುತ್ತಾಳೆ. ಗಾಯಕ್ಕೆ ಕಟ್ಟಲು ತನ್ನ ಬೆಲೆಬಾಳುವ ಸೀರೆಯ ಅಂಚನ್ನೇ ಹರಿದು ಕೈಬೆರಳಿನ ಗಾಯಕ್ಕೆ ಸುತ್ತಿರುತ್ತಾಳೆ. ಆಗ ಶ್ರೀಕೃಷ್ಣನು ದ್ರೌಪದಿಗೆ 'ನೀನಿವತ್ತು ಉಟ್ಟಿರುವ ನಿನ್ನ ಸೀರೆಯ ಅಂಚನ್ನೇ ಹರಿದು ನನ್ನ ಕೈಯ ಗಾಯಕ್ಕೆ ಕಟ್ಟಿರುವೆ, ಮುಂದೊಂದು ದಿನ ನಿನಗೆ ಅಂತ್ಯವೇ ಇಲ್ಲದ ಸೀರೆಯನ್ನು ನಾನು ಕೊಡುತ್ತೇನೆ' ಎಂದು ಅಭಯವನ್ನು ನೀಡಿರುತ್ತಾನೆ.



ಇಲ್ಲಿ ದ್ರೌಪದಿಯು ತಾನು ಮಾಡಿದ ಅತೀ ಸಣ್ಣ ಸಾಂದರ್ಭಿಕ ಸಹಾಯವು ಆಕೆಯ ಪಾಲಿಗೆ ಬಲು ದೊಡ್ಡ ವರವಾಯಿತು. ಸಹಾಯ ಮಾಡುವ ನಿರ್ಧಾರವು ಮನಸ್ಸಿನಾಳದಿಂದ ಬಂದಾಗ ಅದಕ್ಕೆ ಸಮಯ, ಸಂದರ್ಭ ಅಥವಾ ಅದರಿಂದ ದೊರೆಯುವ ಲಾಭದ ಯೋಚನೆಯೂ ಇರುವುದಿಲ್ಲ. ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತಿರುವವನಿಗೆ ಹುಲ್ಲುಕಡ್ಡಿಯೂ ವರವಾಗುವಂತೆ ಕಷ್ಟದಲ್ಲಿ ಇರುವವರಿಗೆ ಮನಃಪೂರ್ವಕವಾಗಿ ಸಹಾಯವನ್ನು ಮಾಡಬೇಕು. ಅದಕ್ಕಾಗಿ ಎಂದಿಗೂ ಯಾರಿಂದಲೂ ಯಾವ ಪ್ರತಿಫಲವನ್ನು ನಿರೀಕ್ಷಿಸಬಾರದು. ಕೃಷ್ಣನ ಕೈಯಿಂದ ಸೋರುತ್ತಿದ್ದ ರಕ್ತವನ್ನು ತಡೆಯುವ ಏಕೈಕ ಉದ್ದೇಶವನ್ನು ಹೊಂದಿದ್ದ ದ್ರೌಪದಿಯು ಆ ಸನ್ನಿವೇಶದಲ್ಲಿ ತಾನು ಉಟ್ಟಿದ್ದ ಅತ್ಯಂತ ಬೆಲೆಬಾಳುವ ಸೀರೆಯ ಅಂಚನ್ನು ಹರಿದು ಕೈಗೆ ಕಟ್ಟಿದ್ದಳು. ಸಹಾಯವನ್ನು ಯಾರಿಗೆ, ಯಾವಾಗ ಯಾವ ಪ್ರಮಾಣದಲ್ಲಿ ಮಾಡುತ್ತಿದ್ದೇವೆ ಎನ್ನುವುದು ಮುಖ್ಯವಲ್ಲ, ಬದಲಿಗೆ ಆ ಸಹಾಯವು ಆ ವ್ಯಕ್ತಿಗೆ ಎಷ್ಟು ಸಹಕಾರಿಯಾಗುತ್ತದೆ ಎನ್ನುವುದು ಮುಖ್ಯ. ದುಶ್ಯಾಸನು ತುಂಬಿದ ರಾಜ ಸಭೆಯಲ್ಲಿ ದ್ರೌಪದಿಯ ವಸ್ತ್ರವನ್ನು ಎಳೆಯುತ್ತಿದ್ದಾಗ ಅದನ್ನು ತಡೆಯುವ ಶಕ್ತಿಯಿದ್ದವರೆಲ್ಲ ನೋಡಿ ಆನಂದಿಸುತ್ತಿದ್ದರು. ಇಂತಹ ಸಮಯದಲ್ಲಿ ದ್ರೌಪದಿಯ ಮಾನವನ್ನು ಕಾಪಾಡಿದ್ದು, ಅಂದು ಆಕೆ ಹರಿದು ಕೃಷ್ಣನ ಕೈಗೆ ಕಟ್ಟಿದ ತುಂಡು ಸೀರೆಯೇ. ಮಾಡುವ ಸಣ್ಣ ಸಹಾಯದಲ್ಲೂ ಸ್ವಾರ್ಥವಿರದೇ ಇರಲಿ.

# ಬಿಜೆಪಿಯಿಂದ ಮತಯಾಚನೆ ಸಂಪರ್ಕ ಅಭಿಯಾನ

**ಉದಯರಶ್ಮಿ ನ್ಯೂಸ್**




ಕಲಕೇರಿ: ದೇವರ ಹಿಪ್ಪರಗಿ ವಿಧಾನಸಭಾ ಕ್ಷೇತ್ರದ ಮಹಾಶಕ್ತಿಕೇಂದ್ರ ಕಲಕೇರಿಯ ಹಿರೇಮಠ ಮತ್ತು ಗದ್ದಿಗೆಮಠ ಗುರುಹಿರಿಯರಿಗೆ ಬಿಜೆಪಿ ಪಕ್ಷದ ಕರಪತ್ರಗಳನ್ನು ನೀಡುವ ಮೂಲಕ ವಿಜಯಪುರ ಲೋಕಸಭಾ ಚುನಾವಣೆಯ ಪ್ರಚಾರವನ್ನು ಆರಂಭಿಸಿದರು.

ವಿಜಯಪುರ ಲೋಕಸಭಾ ಮೀಸಲು ಕ್ಷೇತ್ರದ ಅಭ್ಯರ್ಥಿ ಹಿರಿಯ ರಾಜಕಾರಣಿಗಳಾದ ರಮೇಶ ಜಿಗಜಿಣಗಿ ಅವರ ಪರವಾಗಿ ಭಾರತೀಯ ಜನತಾ ಪಾರ್ಟಿಯ ಜಿಲ್ಲಾ ಉಪಾಧ್ಯಕ್ಷರು, ದೇವರ ಹಿಪ್ಪರಗಿ ಮಂಡಲ ಉಪಾಧ್ಯಕ್ಷರು, ಯುವ ಮೋರ್ಚಾ ಅಧ್ಯಕ್ಷರು, ಮಹಾಶಕ್ತಿ ಕೇಂದ್ರದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಪಕ್ಷದ ಕಾರ್ಯಕರ್ತರು ಗ್ರಾಮದ ಪ್ರಮುಖ ಬಜಾರದಲ್ಲಿ ಮತ್ತು ಮನೆ ಮನೆಗೆ ತೆರಳಿ ಬಿಜೆಪಿ ಪಕ್ಷದ ಕರಪತ್ರಗಳನ್ನು ನೀಡಿ ಮತಯಾಚನೆ ಸಂಪರ್ಕ ಅಭಿಯಾನ ಪ್ರಾರಂಭ ಮಾಡಿದರು.

ಈ ವೇಳೆ ಪಕ್ಷದ ಮುಖಂಡರುಗಳು ಮತ್ತು ಪದಾಧಿಕಾರಿಗಳಾದ ಪ್ರಭುಗೌಡ ಬಿರಾದಾರ ಅಸ್ಕಿ, ಸುಧಾಕರ ಅಡಕಿ, ಅಪ್ಪು ದೇಸಾಯಿ, ಸೋಮಶೇಖರ್ ಸಜ್ಜನ, ಕಿರಣ್‌ಕುಮಾರ್ ದೇಸಾಯಿ, ಪ್ರಕಾಶ ಯರನಾಳ, ಪವನಕುಮಾರ್ ನಾಡಗೌಡ, ಮಡಿವಾಳಪ್ಪ ಹೂಗಾರ, ಶಿವಾನಂದ್ ಗಣೇಶಮಠ, ಅಶೋಕ ವಡ್ಡರ, ಸುನೀಲ್ ಬಡಿಗೇರ, ಸುನೀಲ್ ಕಲಕೇರಿ ಸೇರಿದಂತೆ ಪಕ್ಷದ ಪದಾಧಿಕಾರಿಗಳು ಕಾರ್ಯಕರ್ತರು ಭಾಗವಹಿಸಿದ್ದರು

# ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಆಯ್ಕೆ

**ಉದಯರಶ್ಮಿ ನ್ಯೂಸ್**




ಇಂಡಿ: ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಅಧ್ಯಕ್ಷರಾಗಿ ವೈ.ಟಿ.ಪಾಟೀಲ ಆಯ್ಕೆಯಾಗಿದ್ದಾರೆ.

ಪ್ರಧಾನ ಕಾರ್ಯದರ್ಶಿಯಾಗಿ ಅಲ್ತಾಫ್ ಬೋರಾಮಣಿ, ಉಪಾಧ್ಯಕ್ಷರಾಗಿ ಸಿ.ಎಸ್.ಝಳಕಿ, ಮಹಿಳಾ ಉಪಾಧ್ಯಕ್ಷರಾಗಿ ಶ್ರೀಮತಿ ಜೆ.ಎಸ್.ತೆಲಗ ಆಯ್ಕೆಯಾದರು.

ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಇಂಡಿ ತಾಲೂಕಾ ಕನಕದಾಸ ನೌಕರರ ಸಂಘದ ಅಧ್ಯಕ್ಷ ಬಿ.ಎಸ್. ಪಾಟೀಲ ಹಾಗೂ ಸರ್ವ ಸದಸ್ಯರು, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿಕಟಪೂರ್ವ ಅಧ್ಯಕ್ಷ ಬಿ.ಟಿ.ಗೌಡರ, ಇಂಡಿ ತಾಲೂಕಿನ ನಿಕಟಪೂರ್ವ ಅಧ್ಯಕ್ಷ ಎಸ್.ವಿ.ಹರಳಯ್ಯ, ಪ್ರಧಾನ ಕಾರ್ಯದರ್ಶಿ ಎಂ.ಎನ್. ನೇದಲಗಿ, ಶಿಕ್ಷಕರ ಸೊಸೈಟಿಯ ಅಧ್ಯಕ್ಷ ಪಿ.ಎಸ್.ಚಾಂದಕವಟೆ, ಚಡಚಣ ತಾಲೂಕಿನ ಕಸಾಪ ಅಧ್ಯಕ್ಷ ಎಸ್.ಎಲ್.ಮಾನೆ ನೂತನ ಪದಾಧಿಕಾರಿಗಳಿಗೆ ಸನ್ಮಾನಿಸಿದರು.

ಸಭೆಯಲ್ಲಿ ರಾಯಣ್ಣ ಇವಣಗಿ, ತಾಲೂಕಿನ ಶಿಕ್ಷಕರ ಹಾಗೂ ಕನಕದಾಸ ನೌಕರರ ಸಂಘದ ಸರ್ವ ಸದಸ್ಯರು ಪಾಲ್ಗೊಂಡಿದ್ದರು.

# ಮೋದಿ ನಾಯಕತ್ವದಿಂದ ದೇಶದ ಭದ್ರತೆ :ಕಾಸುಗೌಡ



**ಉದಯರಶ್ಮಿ ನ್ಯೂಸ್**

ಇಂಡಿ: ಎರಡು ಬಾರಿ ಪ್ರಧಾನಿಯಾಗಿ, ಮೂರು ಬಾರಿ ಗುಜರಾತ ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿರುವ ನರೇಂದ್ರ ಮೋದಿ ಅವರ ನಾಯಕತ್ವ ದೇಶದ ಭದ್ರತೆ ವಿಚಾರದಲ್ಲಿ ಅನಿವಾರ್ಯವಾಗಿದೆ ಎಂದು ವಿಜಯಪುರ ಜಿಲ್ಲಾ ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಕಾಸುಗೌಡ ಬಿರಾದಾರ ಹೇಳಿದರು.

ವಾರ್ಡ ನಂ,12ರಲ್ಲಿ ಬಿಜೆಪಿ ವಿಜಯಪೂರ ಲೋಕಸಭಾ ಅಭ್ಯರ್ಥಿ ರಮೇಶ ಜಿಗಜಿಣಗಿಯವರ ಪರವಾಗಿ ತಯಾಚನೆ ಮಾಡಿ ಮಾತನಾಡಿದರು.

ಸಂಸದ ರಮೇಶ ಜಿಗಜಿಣಗಿ ಸರ್ವಜನಾಂಗವನ್ನು ಪ್ರೀತಿ, ವಿಶ್ವಾದಿಂದ ಕಾಣುವ ಹೃದಯವಂತ ರಾಜಕಾರಣಿ, ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ದಿಪರ ಕೆಲಸ ಮಾಡಿದ್ದಾರೆ. ರಾಷ್ಟ್ರೀಯ ಹೆದ್ದಾರಿ, ವಿಮಾನ ನಿಲ್ದಾಣ, ರೈಲ್ವೇ ಓರ್ ಬ್ರೀಜ್, ನೀರಾವರಿ ಯೋಜನೆಗಳು , ಬಹುಹಳ್ಳಿ ಕುಡಿಯುವ ನೀರಿನ ಯೋಜನೆ ಸೇರಿದಂತೆ ಸಾಕಷ್ಟು ಯೋಜನೆಗಳ ಹೊಳೆಯನ್ನೆ ಹರಿಸಿದ್ದಾರೆ. ಕಾರಣ ಅವರಿಗೆ ಇದೊಂದು ಬಾರಿ ಅರ್ಶಿವಾದ ಮಾಡಬೇಕು ಎಂದು ಮನವಿ ಮಾಡಿದರು.


ಅನೀಲಗೌಡ ಬಿರಾದಾರ, ಸಿದ್ದಲಿಂಗ ಹಂಜಗಿ, ದೇವೇಂದ್ರ ಕುಂಬಾರ, ಶಿವು ಬಗಲಿ, ಅಶೋಕಗೌಡ ಬಿರಾದಾರ, ಮಹೇಶ ಹೂಗಾರ, ಸುನಂದಾ ಗಿರಣಿವಡ್ಡರ, ವಿಜಯಲಕ್ಷ್ಮಿ ರೂಗಿಮಠ, ಅನುಸುಯ್ಯಾ ಮದರಿ, ಸುನೀಲ ಕಾಲೇಬಾಗ, ಮಲ್ಲು ವಾಲೀಕಾರ, ಸಚೀನ ಬೋಳೇಗಾಂವ್, ದತ್ತಾ ಬಂಡೇನವರ್ ಮತ್ತಿತರಿದ್ದರು.

# ಅನುಭವಿ ಆಲಗೂರ ಜಯದಿಂದ ಜಿಲ್ಲೆ ಅಭಿವೃದ್ಧಿ :ಯಶವಂತರಾಯಗೌಡ

**ಉದಯರಶ್ಮಿ ನ್ಯೂಸ್**

ಇಂಡಿ: ಸಜ್ಜನ ಹಾಗೂ ಅನುಭವಿಯಾದ ಕಾಂಗ್ರೆಸ್‌ನ ಲೋಕಸಭೆ ಅಭ್ಯರ್ಥಿ ರಾಜು ಆಲಗೂರರಿಗೆ ಮತ ನೀಡಿದರೆ ಜಿಲ್ಲೆಯಲ್ಲಿ ಮತ್ತಷ್ಟು ಅಭಿವೃದ್ಧಿಯಾಗಲಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ತಾಲೂಕಿನ ಅಗರಖೇಡ ಹಾಗೂ ಹಿರೇ ಬೇನೂರಲ್ಲಿ ನಡೆದ ಜಿಪಂ ವ್ಯಾಪ್ತಿಯ ಲೋಕಸಭೆ ಚುನಾವಣೆ ಸಭೆಯಲ್ಲಿ ಮಾತನಾಡಿದ ಅವರು, ಭೀಮೆಯ ದಡದ ಗ್ರಾಮಗಳಿಗೆ ಹಲವು ಅನುಕೂಲ ಮಾಡಿಕೊಡಲಾಗಿದೆ. ಕಾಂಗ್ರೆಸ್ ಅಭ್ಯರ್ಥಿ ಗೆದ್ದರೆ ನೀರಾವರಿ, ಪ್ರವಾಸೋದ್ಯಮ, ಲಿಂಬೆ ಬೆಳೆಗಳಿಗೆ ಪ್ರಾತಿನಿಧ್ಯ ಸೇರಿದಂತೆ ನೂರಾರು




ಕೆಲಸಗಳು ತಮಗಾಗಲಿವೆ. ಕೆಲಸ ಮಾಡುವವರಿಗೆ ಮತ ನೀಡಿದರೆ ಅವರಿಗೆ ಉತ್ತೇಜನ ಸಿಗುತ್ತದೆ. ಆದ-ಧ್ಯಾತ್ಮಿಕ ಸ್ವರೂಪದ ನೆಲ ಇದಾಗಿದೆ. ಈ ಕ್ಷೇತ್ರವನ್ನು ಹಿಂದೆಂದೂ ಕಾಣದಂತಹ ಅಭಿವೃದ್ಧಿ ಮಾಡಿದ್ದೇವೆ. ಸಾವಿರಾರು ಕೋಟಿ ರೂ. ಅನುದಾನ ನೀಡಿದ್ದೇವೆ. ಇಂಡಿ ನಗರಕ್ಕೆ ನಿರಂತರ ನೀರು, ರಸ್ತೆ, ಭೀಮಾಶಂಕರ ಸಕ್ಕರೆ ಕಾರಖಾನೆ ನಮ್ಮ ಸಾಧನೆಗಳು ಎಂದು ಹೇಳಿದರು.

ಅಭ್ಯರ್ಥಿ ಪ್ರೊ.ರಾಜು ಆಲಗೂರ ಅವರು ಮಾತನಾಡಿ, ಮೋದಿಯವರು ಉದ್ಯಮಪತಿಗಳ ಬಗ್ಗೆ ತೋರಿದ ಕಾಳಜಿ ರೈತ-ರಿಗೆ ತೋರಿಸಿದ್ದರೆ ಈ ದೇಶ ಉದ್ಧಾರವಾಗುತ್ತಿತ್ತು ಎಂದು ಹೇಳಿದರು.

ಉದ್ಯಮಿಗಳ ಹದಿನಾಲ್ಕು ಲಕ್ಷ ಕೋಟಿ ಸಾಲವನ್ನು ಮನ್ನಾ ಮಾಡಿರುವ ಮೋದಿಯವರ ಕಣ್ಣಿಗೆ ರೈತರ ಕೇವಲ ಒಂದೂವರೆ ಲಕ್ಷ ಕೋಟಿ ಸಾಲ ಕಾಣಲಿಲ್ಲ. ಇಲ್ಲಿನ ಸಂಸದ ಏನೊಂದು ಕೆಲಸ ಮಾಡಿಲ್ಲ. ಜಿಲ್ಲೆಯ ಅಭಿವೃದ್ಧಿಗೆ ನನಗೆ ಮತ ನೀಡಿದರೆ ನಿಮ್ಮ ಸೇವಕನಾಗಿ ದುಡಿಯುವೆ ಎಂದು ಕೋರಿದರು.

ಇಲಿಯಾಸ್ ಬೋರಾಮಣಿ ಅವರು ರಾಜ್ಯ ಸರಕಾರದ ಗ್ಯಾರಂಟಿ ಯೋಜನೆಗಳ ಸಾಕಾರವಾಗಿದ್ದನ್ನು ವಿವರಿಸಿ, ತಾಲೂಕಿಗೆ ಪ್ರತಿ ತಿಂಗಳು ಹದಿಮೂರು ಕೋಟಿ.ಯಷ್ಟು ಹಣ ಈ ಯೋಜನೆಯಿಂದ ಬರುತ್ತಿದೆ ಎಂದರು.

ಮುಖಂಡರಾದ ಅಣ್ಣಾರಾಯ ಬಿದರಕೋಟಿ, ಜಟ್ಟೆಪ್ಪ ರವಳಿ, ಎಂ.ಆರ್.ಪಾಟೀಲ, ಕಲ್ಯಾಣಗೌಡ ಪಾಟೀಲ, ಭೀಮಣ್ಣ ಕವಲಗಿ, ಶೈಲಶ್ರೀ ಜಾಧ್ವ, ಸಿದ್ಧರಾಯ ಐರೋಡಗಿ, ಕಲ್ಲನಗೌಡ, ಬ್ಲಾಕ್ ಅಧ್ಯಕ್ಷರಾದ ಜಾವೇದ್ ಮೋಮಿನ್, ಕಲ್ಲನಗೌಡ ಬಿರಾದಾರ, ಶ್ರೀಶೈಲ, ಪೈಗಂಬರ್ ದೇಸಾಯಿ, ಭೋಜಪ್ಪಗೌಡ ಸಾಹುಕಾರ, ದಸ್ತಗೀರ್, ಗಿರೀಶಗೌಡ ಪಾಟೀಲ, ಭೀಮಣ್ಣ ಕವಲಗಿ, ಸೇ-ರಿದಂತೆ ಅನೇಕರಿದ್ದರು.

# ಬಸವನಬಾಗೇವಾಡಿ ಉತ್ತರಾದಿ ಮಠದ ವರ್ಧಂತ್ಯೋತ್ಸವ

**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಪಟ್ಟಣದ ಚತುಷ್ಟ ಯತಿಗಳ ವೃಂದಾವನ ಸನ್ನಿದಾನ ಉತ್ತರಾದಿ ಮಠದಲ್ಲಿ 7 ನೇ ವರ್ಷದ ವರ್ಧಂತಿ ಉತ್ಸವ ಗುರುವಾರ ಪವಮಾನ ಹೋಮ, ಪೂಜೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ವೈಭವದಿಂದ ಜರುಗಿದವು.

ಬೆಳಗ್ಗೆ 6 ಗಂಟೆಗೆ ವಾಯುಸ್ತುತಿ, ವಿಷ್ಣು ಸಹಸ್ರನಾಮ ಅಷ್ಟೋತ್ತರ ಜಪವಾದ ನಂತರ ಪವಮಾನ ಹೋಮ, ಪಂಚಾಮೃತ ಅಭಿಷೇಕ ಹಾಗೂ ಪುಷ್ಪಾಲಂಕಾರ ಜರುಗಿದ ನಂತರ ವಿಶೇಷ ಪೂಜೆ ಹಾಗೂ ಪಲ್ಲಕ್ಕಿ ಉತ್ಸವ ಜರುಗಿತು.



ಶ್ರೀಮಠದ ಅರ್ಚಕ ವಾದಿರಾಜಾಚಾರ್ಯ ಯಜುರ್ವೇದಿ ಮಾತನಾಡಿ, ಮಠದಲ್ಲಿರುವ ಚತುಷ್ಟ ಯತಿಗಳ ದರ್ಶನ ಹಾಗೂ ಸೇವೆಯನ್ನು ಮಾಡಿದರೆ ಸಕಲ ಕಷ್ಟಗಳು,ಪಾಪಗಳು ಪರಿಹಾರವಾಗಿ ಸಕಲ ಇಷ್ಟಾರ್ಥಗಳು ನೆರವೇರುತ್ತವೆ ಎಂದರು.

ಸಾವಿರ ಹಾಡಿನ ಸರದಾರ ಎಂದು ಖ್ಯಾತರಾದ ಜಿ.ಬಿ.ಜೋಶಿ ಅವರಿಂದ ಸಂಗೀತ ಸೇವೆ ಜರುಗಿತು. ಶ್ರೀಮಠದ ಅಧ್ಯಕ್ಷ ವಸಂತಾಚಾರ್ಯ ಇಂಗಳೇಶ್ವರ ನೇತೃತ್ವದಲ್ಲಿ ಎಲ್ಲ ಪೂಜಾ ಕಾರ್ಯಕ್ರಮ, ವಿಶೇಷ ಕಾರ್ಯಕ್ರಮಗಳು ಜರುಗಿದವು. ಇದೇ ಸಂದರ್ಭದಲ್ಲಿ ವೇದಮೂರ್ತಿ ಶ್ರೀನಿವಾಸಾಚಾರ್ಯ ಜೋಶಿ (ಮುತ್ತಗಿ), ವೇದಮೂರ್ತಿ ರಾಮಾಚಾರ್ಯ ಜೋಶಿ(ಹಿಪ್ಪರಗಿ) ಹಾಗೂ ಜಿ.ಬಿ.ಜೋಶಿ ಅವರನ್ನು ಶ್ರೀಮಠದಿಂದ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮುತ್ತಗಿಯ ಪಂ.ಪೂ. ನರಹರಿಆಚಾರ್ಯ ಜೋಶಿ, ವಸಂತ ಕುಲಕರ್ಣಿ, ವಿಠ್ಠಲ ಕುಲಕರ್ಣಿ, ಎ.ಆರ್.ಕುಲಕರ್ಣಿ, ಎ.ಜಿ.ಕುಲಕರ್ಣಿ, ರಾಮಾಚಾರ್ಯ ಯಜುರ್ವೇದಿ, ಪ್ರಲ್ಹಾದ ಕುಲಕರ್ಣಿ, ವಿಠ್ಠಲ ದೇಶಪಾಂಡೆ, ಯಲಗೂರೇಶ ಯಜುರ್ವೇದಿ, ನಾರಾಯಣ ಕುಲಕರ್ಣಿ, ಜಿ.ವ್ಹಿ.ಕುಲಕರ್ಣಿ, ವಿಪ್ರ ಸಮಾಜದ ಸಮಸ್ತ ಬಾಂಧವರು, ಮಹಿಳೆಯರು ಇದ್ದರು.

ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

# ಅಕ್ಕಮಹಾದೇವಿ ನಮ್ಮೆಲ್ಲರಿಗೂ ಸ್ಫೂರ್ತಿ :ತಡವಲ್

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಕನ್ನಡದ ಪ್ರಥಮ ಮಹಿಳಾ ಕವಿಯತ್ರಿಯಾಗಿ, ವಚನ ಸಾಹಿತ್ಯಕ್ಕೆ ತನ್ನದೆಯಾದ ಕೊಡುಗೆ ನೀಡಿದ ಶಿವಶರಣೆ ಅಕ್ಕಮಹಾದೇವಿ ನಮ್ಮೆಲ್ಲರಿಗೂ ಸ್ಫೂರ್ತಿಯಾಗಿದ್ದಾರೆ ಎಂದು ಬಸವ ಶರಣ ಸಂಗಮ ಸಮಿತಿ ಅಧ್ಯಕ್ಷ ಸಂಗಣ್ಣ ತಡವಲ್ ಹೇಳಿದರು.

ಪಟ್ಟಣದ ಚೌಡೇಶ್ವರಿ ದೇವಸ್ಥಾನದ ಆವರಣದಲ್ಲಿ ಮಂಗಳವಾರ ಬಸವಶರಣ ಸಂಗಮ ಸಮಿತಿ ಅಡಿಯಲ್ಲಿ ಅಕ್ಕಮಹಾದೇವಿ ಜಯಂತಿ ಅಂಗವಾಗಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಚೈತ್ರ ಮಾಸದ ಚಿತ್ತಾ ನಕ್ಷತ್ರದ ದವನದ ಹುಣ್ಣಿಮೆಯ ದಿನ ಶಿವಶರಣೆ ಅಕ್ಕಮಹಾದೇವಿ ಮಹಾಮಾತೆ ಜನಿಸಿ, ಶರಣ ಚಳುವಳಿಯ ಮುಂಚೂಣಿಯಲ್ಲಿ ಕಲ್ಯಾಣ ಕ್ರಾಂತಿಯ ಜೊತೆಗೆ ಇಡೀ ತಮ್ಮ ಬದುಕನ್ನು ಹೋರಾಟದಲ್ಲಿ ಕೊನೆಗಾಣಿಸಿದವರು. ಅವರ ಜೀವನ, ಸಾಧನೆ, ರಚಿಸಿದ ವಚನಗಳ ಸಾರವನ್ನು ನಾವು ಅರಿತುಕೊಂಡು ಮುನ್ನಡೆಯೋಣ ಎಂದರು.



ವಚನ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಜೆ.ಆರ್.ಬಿರಾದಾರ, ಕಸಾಪ ತಾಲ್ಲೂಕು ಅಧ್ಯಕ್ಷ ಜಿ.ಪಿ.ಬಿರಾದಾರ, ಕೆ.ಎಮ್.ನಂದಿ, ಗೋಲ್ಲಾಳ ಬಿರಾದಾರ, ನಿಂಗು ಜಡಗೊಂಡ, ಮಲ್ಲು ಹಳಿಮನಿ, ಕಾಶೀನಾಥ ರಾಮಗೊಂಡ, ಕಾಸಪ್ಪ ಕುಂಬಾರ, ಹನುಮೇಶ ನಂದ್ಯಾಳ, ಶ್ರೇಯಾ, ರಾಣಿ ಸೇರಿದಂತೆ ಮಕ್ಕಳು ಇದ್ದರು.

# ಮಲ್ಲಯ್ಯ ಕಂಬಿಗಳ ಪುರಪ್ರವೇಶ :ಭಕ್ತರಿಂದ ಅದ್ದೂರಿ ಸ್ವಾಗತ

**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಸುಕ್ಷೇತ್ರ ಶ್ರೀಶೈಲ ಕ್ಷೇತ್ರಕ್ಕೆ ತೆರಳಿದ್ದ ಮಲ್ಲಯ್ಯನ ಕಂಬಿಗಳನ್ನು ಭಕ್ತರು ವಿವಿಧ ವಾದ್ಯ ಮೇಳಗಳೊಂದಿಗೆ ಸಂಭ್ರಮ, ಸಡಗರದಿಂದ ಗುರುವಾರ ಬರಮಾಡಿಕೊಂಡರು.



ಕಳೆದ ತಿಂಗಳು ಹೋಳಿಹುಣ್ಣಿಮೆ ಮರುದಿನ ಇಲ್ಲಿಂದ ಪಾದಯಾತ್ರಾ ಭಕ್ತರೊಂದಿಗೆ ಕಂಬಿಗಳು ಪಾದಯಾತ್ರೆ ಮೂಲಕ ಶ್ರೀಶೈಲ ಕ್ಷೇತ್ರಕ್ಕೆ ತೆರಳಿದ್ದವು. ದ್ವಾದಶ ಲಿಂಗಗಳಲ್ಲಿ ಒಂದಾದ ಸುಕ್ಷೇತ್ರ ಶ್ರೀಶೈಲ ಮಲ್ಲಿಕಾರ್ಜುನ ಕ್ಷೇತ್ರದಲ್ಲಿ ಪ್ರತಿ ವರ್ಷ ಯುಗಾದಿ ಹಬ್ಬದಂದು ನಡೆಯುವ ರಥೋತ್ಸವದಲ್ಲಿ ಈ ಭಾಗದ ಜನರು ಭಾಗವಹಿಸಿ ತಮ್ಮ ತಮ್ಮ ಗ್ರಾಮಗಳಿಗೆ ಆಗಮಿಸುತ್ತಾರೆ. ತದ ನಂತರ ಹುಣ್ಣಿಮೆಗೆ ಆಯಾ ಆಯಾ ಗ್ರಾಮಗಳಿಗೆ ಅಂದು ತೆರಳಿದ್ದ ಮಲ್ಲಯ್ಯನ ಕಂಬಿಗಳು ಆಗಮಿಸುವದು ಸಾಮಾನ್ಯ.

ಪಟ್ಟಣದ ಮುದ್ದೇಬಿಹಾಳ ರಸ್ತೆಯಲ್ಲಿರುವ ಕಂಬಿ ಕಟ್ಟೆಗೆ ನಿನ್ನೆ ರಾತ್ರಿ ಮಲ್ಲಯ್ಯನ ಕಂಬಿಗಳು ಬಂದಿದ್ದವು. ಇಂದು ಬೆಳಗ್ಗೆ ಇಲ್ಲಿನ ಭಕ್ತರು ಕುಂಬಾರರ ಮನೆಗೆ ತೆರಳಿ ಅಲ್ಲಿಂದ ಪೂಜಾ ಸಾಮಗ್ರಿಗಳೊಂದಿಗೆ ಬಸವೇಶ್ವರರ ವಂಶಸ್ಥರಾದ ಕುಲಕರ್ಣಿಯವರ ಮನೆಗೆ, ಗೌಡರ ಮನೆಗೆ ವಿವಿಧ ವಾದ್ಯ ಮೇಳಗಳೊಂದಿಗೆ ತೆರಳಿ ಅವರನ್ನು ಕರೆದುಕೊಂಡು ಕಂಬಿ ಕಟ್ಟೆಗೆ ಆಗಮಿಸಿದರು. ನಂತರ ಕಂಬಿ ಕಟ್ಟೆಯಲ್ಲಿ ಮಲ್ಲಯ್ಯನ ಕಂಬಿಗಳಿಗೆ ವಿಶೇಷ ಪೂಜೆ ಸಲ್ಲಿಸಿ ಮಂಗಳಾರತಿ ಸಲ್ಲಿಸಿ ವಾದ್ಯಮೇಳಗಳೊಂದಿಗೆ ಬಸವೇಶ್ವರ ದೇವಸ್ಥಾನಕ್ಕೆ ಭಕ್ತರು ಅವುಗಳನ್ನು ಬರಮಾಡಿಕೊಂಡರು. ಬಸವೇಶ್ವರ ದೇವಸ್ಥಾನದಲ್ಲಿ ಬಂದು ಕುಳಿತ ಮಲ್ಲಯ್ಯನ ಕಂಬಿಗಳಿಗೆ ಭಕ್ತರು ಬೆಲ್ಲವನ್ನು ಮಲ್ಲಯ್ಯನಿಗೆ ಅರ್ಪಿಸಿ ನೆರೆದ ಭಕ್ತ ಸಮೂಹಕ್ಕೆ ಹಂಚಿ ಧನ್ಯತಾ ಭಾವ ಅನುಭವಿಸಿದರು.

ವೇ.ಗುರುಸಂಗಯ್ಯ ಮಠಪತಿ, ಶ್ರೀಶೈಲ ಮಠಪತಿ ಅವರನ್ನು ಮಾತನಾಡಿಸಿದಾಗ, "ಪ್ರತಿ ವರ್ಷವೂ ಮಲ್ಲಯ್ಯನ ಕಂಬಿಗಳು ಶ್ರೀಶೈಲಕ್ಕೆ ತೆರಳುತ್ತವೆ. ಅಲ್ಲಿ ಮಲ್ಲಯ್ಯನ ಜಾತ್ರೆ ಮುಗಿಸಿಕೊಂಡು ಹದಿನೈದು ದಿನಗಳ ನಂತರ ಕಂಬಿಗಳು ಆಗಮಿಸಿದ ನಂತರ ಶ್ರೀಶೈಲ ಮಲ್ಲಿಕಾರ್ಜುನ ಭಕ್ತರು ತಮ್ಮ ತಮ್ಮ ಮನೆಗಳಲ್ಲಿ ಭೋರಮ್ಮ ಎಂದು ಪೂಜೆಯನ್ನು ಮಾಡುವ ಮೂಲಕ ಶ್ರೀಶೈಲ ಕ್ಷೇತ್ರದ ಹರಕೆಯನ್ನು ತೀರಿಸುವ ಪದ್ಧತಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಪ್ರತಿ ಗ್ರಾಮದಲ್ಲಿ ಮಲ್ಲಯ್ಯನ ಕಂಬಿಗಳು ಬಂದ ನಂತರವೇ ಈ ಪೂಜೆ ಎಲ್ಲರ ಮನೆಯಲ್ಲಿ ಅವರ ಅನುಕೂಲಕ್ಕೆ ತಕ್ಕಂತೆ ಎರಡು ತಿಂಗಳ ಕಾಲ ನಡೆಯುತ್ತದೆ. ಏ.29 ರಂದು ಪಟ್ಟಣದಲ್ಲಿ ಐದೇಶಿ(ಬೋರಮ್ಮ) ಪೂಜೆಯನ್ನು ಭಕ್ತರು ಮಾಡುವರು" ಎಂದರು.

ಕಂಬಿ ಮೆರವಣಿಗೆಯಲ್ಲಿ ವೇ. ಗುರುಸಂಗಯ್ಯ ಮಠಪತಿ, ವೀರಗಂಗಾಧರಯ್ಯ ಕಾಳಹಸ್ತೇಶ್ವರಮಠ, ಮುದುಕಯ್ಯ ತೆಗ್ಗಿನಮಠ, ಮಲ್ಲಯ್ಯ ನರಸಲಗಿಮಠ, ಶ್ರೀಕಾಂತ ಮಠಪತಿ, ಬಸವರಾಜ ಹಾರಿವಾಳ,ಮಲ್ಲಪ್ಪ ಕುಂಬಾರ,ಶ್ರೀಶೈಲ ಮಠಪತಿ, ಮಲ್ಲಪ್ಪ ಕಡಕೋಳ, ಪ್ರವೀಣ ಪೂಜಾರಿ,ರಾಜು ಕಡಿ,ಸಂಗಪ್ಪ ಬೋಳಿ, ಜಗು ಪತ್ತಾರ, ಬ್ರಹ್ಮಾನಂದ ಕುಂಬಾರ, ಶಂಕರಗೌಡ ಪಾಟೀಲ, ಈರಪ್ಪ ಅಡಗಿಮನಿ, ಚನ್ನಪ್ಪ ಪತ್ತಾರ, ಜಗದೇವಿ ಕಡಕೋಳ, ಭಾರತಿ ಮುಳವಾಡ, ರೂಪಾ ಕುಂಬಾರ, ಸಾವಿತ್ರಿ ಸಾರಂಗಮಠ, ಪೂಜಾ ಕುಂಬಾರ, ಶಾಂತವ್ವ ಜಾಡರ, ರಾಜೇಶ್ವರಿ ಕುಂಬಾರ, ಸೌಮ್ಯ ಕುಂಬಾರ, ಮೀನಾಕ್ಷಿ ಕುಂಬಾರ, ರೇಖಾ ಕುಂಬಾರ, ಶ್ರೀದೇವಿ ತೆಗ್ಗಿನಮಠ, ಬೋರಮ್ಮ ಕುಂಬಾರ, ಸೇರಿದಂತೆ ಇತರರು ಭಾಗವಹಿಸಿದ್ದರು.

ಪ್ರಸಾದ ವ್ಯವಸ್ಥೆ: ಪಟ್ಟಣದ ಬಸವೇಶ್ವರ ದೇವಸ್ಥಾನದ ಜೀರ್ಣೋದ್ದಾರಕರ ದಿ. ಮಲ್ಲಪ್ಪ ಸಿಂಹಾಸನ ಪ್ರತಿಮೆ ಆವರಣದಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ಪಾದಯಾತ್ರೆ ಸೇವಾ ಸಮಿತಿಯಿಂದ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಪ್ರಸಾದ ವ್ಯವಸ್ಥೆ ವೀರಗಂಗಾಧರಯ್ಯ ಕಾಳಹಸ್ತೇಶ್ವರಮಠ, ಬಸಯ್ಯ ವಿರಕ್ತಮಠ, ಶರಣು ನಾಲತವಾಡ, ರಮೇಶ ನಾಗೂರ, ಮುನ್ನಾ ಅಗರವಾಲ, ಗಿರೀಶ ಹಾರಿವಾಳ, ಬಾಬು ಕುಂಟೋಜಿ, ಶರಣು ಅಂಗಡಿ, ಬಸು ಹಿರೇಮಠ, ಬಾಬು ದುಂಬಾಳಿ,ಪಾವೆಡಪ್ಪ ಕೊಂಡಗುಳಿ, ಶರಣು ಮನಗೂಳಿ, ಕುಮಾರಗೌಡ ಪಾಟೀಲ, ಬಸವರಾಜ ಅಡಗಿಮನಿ, ಮೀರಾಸಾಬ ಕೊರಬು ಸೇರಿದಂತೆ ಇತರರ ಉಸ್ತುವಾರಿಯಲ್ಲಿ ಜರುಗಿತು.

# ಶ್ರೀಗಿರಿ ಮಲ್ಲಯ್ಯ ಬಂದಾನ ಬನ್ನಿರೋ.. :ಪುರಪ್ರವೇಶ ಮಾಡಿದ ಕಂಬಿಮಲ್ಲಯ್ಯ

**ಉದಯರಶ್ಮಿ ನ್ಯೂಸ್**

ವಿಜಯಪುರ: ಪುರಪ್ರವೇಶ ಮಾಡಿದ ಕಂಬಿ ಮಲ್ಲಯ್ಯನಿಗೆ ಗುರುವಾರ ನಗರದ ಇಬ್ರಾಹಿಂಪುರದಲ್ಲಿ ಗ್ರಾಮಸ್ಥರು ಭವ್ಯ ಸ್ವಾಗತ ಕೋರಿ ಭಕ್ತಿಭಾವದಿಂದ ಬರಮಾಡಿಕೊಂಡರು.

ಯುಗಾದಿ ಹಬ್ಬಕ್ಕೂ ಮುನ್ನ ಇಲ್ಲಿಂದ ಮಲ್ಲಯ್ಯನ ಕಂಬಿಗಳ ಸಮೇತ ಶ್ರೀಶೈಲಕ್ಕೆ ತೆರಳಲಾಗಿತ್ತು. ಪಾತಾಳಗಂಗೆಯಲ್ಲಿ ಕಂಬಿಗಳಿಗೆ ಪೂಜೆ ಮಾಡಿಕೊಂಡು ಮರಳಿ ಬಂದ ಹಿನ್ನೆಲೆಯಲ್ಲಿ ಇಂದು ಗ್ರಾಮಸ್ಥರು ಹಾಗೂ ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಸೇವಾ ಸಮಿತಿಯವರು ಮಲ್ಲಯ್ಯನ ಕಂಬಿಗಳನ್ನು ಗ್ರಾಮದಲ್ಲಿ ಅದ್ದೂರಿಯಿಂದ ಬರಮಾಡಿಕೊಂಡರು.

ಪುರಪ್ರವೇಶ ಮಾಡಿದ ಮಲ್ಲಯ್ಯನ ಕಂಬಿಗಳನ್ನು ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಇರಿಸಲಾಯಿತು. ನಂತರ ದೇವಸ್ಥಾನದ ಅರ್ಚಕ ಓಂಕಾರ ಮಠಪತಿ ಅವರು ಕಂಬಿ ಮಲ್ಲಯ್ಯನಿಗೆ ಪೂಜೆ ನೆರವೇರಿಸಿದರು. ಸುಮಂಗಲೆಯರು ಭಕ್ತಿಭಾವದಿಂದ ಆರುತಿ ಬೆಳಗಿದರು.

ಕಂಬಿಮಲ್ಲಯ್ಯ ಪುರಪ್ರವೇಶ ಮಾಡಿದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಇಂದು ಹಬ್ಬದ ಸಂಭ್ರಮ ಮನೆ ಮಾಡಿತ್ತು.



ಮಹಾನಗರ ಪಾಲಿಕೆ ಸದಸ್ಯ ಕುಮಾರ ಗಡಗಿ, ಗ್ರಾಮದ ಹಿರಿಯರಾದ ಗಿರಮಲ್ಲಪ್ಪ ನುಚ್ಚಿ, ಸೂರ್ಯಕಾಂತ ಗಡಗಿ, ಶಿವಸಂಗಪ್ಪ ಹಳ್ಳಿ, ಅಪ್ಪುಗೌಡ ಪಾಟೀಲ ಸೇರಿದಂತೆ ಸಹಸ್ರಾರು ಜನ ಭಕ್ತರು ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಆಗಮಿಸಿ ಕಂಬಿ ಮಲ್ಲಯ್ಯನ ದರ್ಶನ ಪಡೆದರು.

ಕಂಬಿ ಮಲ್ಲಯ್ಯನ ದರ್ಶನಕ್ಕೆ ಬರುವ ಭಕ್ತರಿಗೆ ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಭಕ್ತರು ಮಲ್ಲಯ್ಯನ ದರ್ಶನ ಪಡೆದು, ರುಚಿ-ರುಚಿಯಾದ ಶಿರಾ, ಮಸಾಲೆ ಅನ್ನ, ಅಂಬಲಿಯ ಸವಿ ಸವಿದರು.

ಸಂಜೆ ಗ್ರಾಮದಲ್ಲಿ ಮಲ್ಲಯ್ಯನ ಕಂಬಿಗಳ ಭವ್ಯ ಮೆರವಣಿಗೆ ನಡೆಯಿತು. ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಿಂದ ವಾದ್ಯಮೇಳದೊಂದಿಗೆ ಹೊರಟ ಮೆರವಣಿಗೆ ಪ್ರಮುಖ ಬೀದಿಯಲ್ಲಿ ಸಂಚರಿಸಿ ಶ್ರೀ ನಂದಬಸವೇಶ್ವರ ದೇವಸ್ಥಾನಕ್ಕೆ ತೆರಳಿತು. ಅಲ್ಲಿ ಪೂಜೆ , ಬಿರುದಾವಳಿ ಮುಗಿಸಿಕೊಂಡು ಮೆರವಣಿಗೆ ಮರಳಿ ಮಲ್ಲಿಕಾರ್ಜುನ ದೇವಸ್ಥಾನ ತಲುಪಿ ಸಂಪನ್ನಗೊಂಡಿತು.

ಮೆರವಣಿಗೆ ಮರಳಿ ಶ್ರೀ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಆಗಮಿಸುತ್ತಿದ್ದಂತೆ ದೇವಸ್ಥಾನದ ಮುಂದಿನ ಮುಖ್ಯ ರಸ್ತೆಯಲ್ಲಿ ಪಟಾಕ್ಷಿ ಸಿಡಿಸಿ ಸಂಭ್ರಮಿಸಲಾಯಿತು.

ಮಲ್ಲಿಕಾರ್ಜುನ ದೇವಸ್ಥಾನ ಸೇವಾ ಸಮಿತಿ ಅಧ್ಯಕ್ಷ ಸುನೀಲ(ಗುರುಪಾದಪ್ಪ) ನುಚ್ಚಿ, ಉಪಾಧ್ಯಕ್ಷ ಸಂಪತ್ ಕೋವಳ್ಳಿ, ಖಜಾಂಚಿ ರೇವಣಕುಮಾರ ಬಗಲಿ, ಕಾರ್ಯದರ್ಶಿ ಮಲ್ಲಿಕಾರ್ಜುನ ನುಚ್ಚಿ ಸದಸ್ಯರಾದ ಕಲ್ಲಪ್ಪ ಜುಮನಾಳ, ಸಂತೋಷ ಪಾಟೀಲ, ವಿನೋದ ನುಚ್ಚಿ, ಬಾಬು ಮಡಿವಾಳ, ಶಂಕರ ಡಂಬಳ, ಯಮನಪ್ಪ ಕಟ್ಟಿಮನಿ, ಯುವ ಮುಖಂಡರಾದ ಶಿವಾನಂದ ನುಚ್ಚಿ, ಗಿರೀಶ ಕವಟಗಿ, ಬಸವರಾಜ ಹಳ್ಳಿ, ಶಾಂತು ಗಲಗಲಿ, ಬಸವರಾಜ ಗುನ್ನಾಪುರ, ಜಗದೀಶ ಜುಮನಾಳ, ಪ್ರವೀಣ ಹಳ್ಳಿ, ಮಲ್ಲಿಕಾರ್ಜುನ ಗಡಗಿ, ರಮೇಶ ಬಗಲಿ, ಸಂತೋಷ ಗುನ್ನಾಪುರ, ಮಂಜುನಾಥ ಹಳ್ಳಿ, ಸುರೇಶ ಬಗಲಿ, ಸೋಮನಗೌಡ ಪಾಟೀಲ, ಗುರುರಾಜ ಪಾಟೀಲ, ಶ್ರೀಶೈಲ ಹಳ್ಳಿ, ರುದ್ರಪ್ಪ ಜುಮನಾಳ, ಯಮನಪ್ಪ ಮೋದಿ ಸೇರಿದಂತೆ ನೂರಾರು ಜನ ಗ್ರಾಮಸ್ಥರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

## ತೋಳದ ದಾಳಿಗೆ 13 ಕುರಿಮರಿಗಳ ಬಲಿ



**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ತೋಳದ ದಾಳಿಗೆ ಸಿಲುಕಿ 13 ಕುರಿಮರಿಗಳು ಬಲಿಯಾದ ಘಟನೆ ದೇವೂರ ಗ್ರಾಮದ ಜಮೀನಿನಲ್ಲಿ ಜರುಗಿದೆ.

ತಾಲ್ಲೂಕಿನ ದೇವೂರ ಗ್ರಾಮದ ಹೊರವಲಯದಲ್ಲಿ ಬುಧವಾರ ಈ ಘಟನೆ ಜರುಗಿದ್ದು, ಘಟನೆಯಲ್ಲಿ ದೇವರಹಿಪ್ಪರಗಿ ನಿವಾಸಿ ಗೊಲ್ಲಾಳಪ್ಪ ಹೊನ್ನಮಿಸಿ ಎಂಬುವವರಿಗೆ ಸೇರಿದ ಕುರಿಮರಿಗಳು ಬಲಿಯಾಗಿವೆ.

ಕುರಿ ಮೇಯಿಸಿಕೊಂಡು ಬಂದು ರಾತ್ರಿ ಕುರಿದೊಡ್ಡಿಯಲ್ಲಿ ಕುರಿಗಳು ಹಾಗೂ ಮರಿಗಳನ್ನು ಪ್ರತ್ಯೇಕವಾಗಿ ಇರಿಸಲಾಗಿತ್ತು. ನಡುರಾತ್ರಿಯಲ್ಲಿ ಮರಿಗಳ ಮೇಲೆ ದಾಳಿ ಮಾಡಿದ ತೋಳ ಅಂದಾಜು 1 ಲಕ್ಷ.ರೂ. ಮೌಲ್ಯದ 13 ಕುರಿಗಳನ್ನು ಕೊಂದಿದೆ.






# ಸಂಭ್ರಮದ ನಾಗಾವಿ ಯಲ್ಲಮ್ಮ ಜಾತ್ರಾಮಹೋತ್ಸವ



**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಪಟ್ಟಣದ ಇಂಗಳೇಶ್ವರ ರಸ್ತೆಯಲ್ಲಿರುವ ನಾಗಾವಿ ಯಲ್ಲಮ್ಮದೇವಿ ಜಾತ್ರಾಮಹೋತ್ಸವ ಮಂಗಳವಾರ ಸಂಭ್ರಮ, ಸಡಗರದಿಂದ ಜರುಗಿ-ತು. ಜಾತ್ರೆಯಂಗವಾಗಿ ಪಲ್ಲಕ್ಕಿ ಉತ್ಸವದ ಮೆರವಣಿಗೆಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಿವಿಧೆಡೆಗಳಿಂದ ಆಗಮಿಸಿದ್ದ ತಾಯಿಜೋಗಮ್ಮರ ಕುಣಿತ, ವಿವಿಧ ವಾದ್ಯ ಮೇಳದೊಂದಿಗೆ ಸಂಭ್ರಮದಿಂದ ಜರುಗಿತು.

ನಾಗಾವಿ ಯಲ್ಲಮ್ಮ ದೇವಸ್ಥಾನದಿಂದ ಐದು ಕಳಸ ಹಾಗೂ ಪಲ್ಲಕ್ಕಿ ಉತ್ಸವವು ಪಟ್ಟಣದ ಬಸವೇಶ್ವರ ವೃತ್ತ, ಅಗಸಿ, ಮಹಾರಾಜರ ಮಠದ ಮಾರ್ಗ, ಬಸವಜನ್ಮ ಸ್ಮಾರಕ ಮಾರ್ಗ, ವಿಜಯಪುರ ಮಾರ್ಗವಾಗಿ ಪುನಃ ಬಸವೇಶ್ವರ ವೃತ್ತಕ್ಕೆ ಬಂದು ಬಸವೇಶ್ವರ ದೇವಸ್ಥಾನದ ಬಸವತೀರ್ಥ ಭಾವಿಗೆ ಆಗಮಿಸಿದ ನಂತರ ಗಂಗಾಸ್ಥಳ ಮಾಡಿಕೊಂಡ ನಂತರ ಡೊಳ್ಳು, ಚೌಡಕಿ ಸೇರಿದಂತೆ ಸುಮಂಗಲೆಯರ ಆರತಿಯೊಂದಿಗೆ ಬಸವೇಶ್ವರ ವೃತ್ತದ ಮಾರ್ಗವಾಗಿ ಇಂಗಳೇಶ್ವರ ರಸ್ತೆಯಲ್ಲಿರುವ ಯಲ್ಲಮ್ಮದೇವಿ ದೇವಸ್ಥಾನಕ್ಕೆ ಕಳಸಗಳು, ನಾಗಾವಿ ಯಲ್ಲಮ್ಮದೇವಿ ಪಲ್ಲಕ್ಕಿ ಉತ್ಸವ ತಲುಪಿತು. ಕಳಸಗಳಿಗೆ ಪೂಜೆ ನೆರವೇರಿಸಿದ ನಂತರ ದೇವಸ್ಥಾನಕ್ಕೆ ಕಳಸಗಳನ್ನು ಏರಿಸಲಾಯಿತು. ದೇವಸ್ಥಾನದಲ್ಲಿ ವಿಶೇಷ ಪೂಜೆ ಜರುಗಿತು. ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಪಲ್ಲಕ್ಕಿ ಉತ್ಸವದಲ್ಲಿ ಬಿರುಬಿಸಿಲನ್ನು ಲೆಕ್ಕಿಸದೇ ಅಪಾರ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು.

ಪಲ್ಲಕ್ಕಿ ಉತ್ಸವದ ಮೆರವಣಿಗೆಯಲ್ಲಿ ಇಂಗಳೇಶ್ವರದ ಜೋಗಮ್ಮ ತಾಯಿ ಶರಣಮ್ಮ ಅಂಬಿಗೇರ ಹಾಗೂ ಇವರ ಸಂಗಡಿಗರ ಜೋಗಮ್ಮ ನೃತ್ಯ ಗಮನ ಸೆಳೆಯಿತು. ಮೆರವಣಿಗೆಯಲ್ಲಿ ಅಕ್ಕಮ್ಮ ನಾಯ್ಕೋಡಿ, ನೀಲಮ್ಮ ಕಾಳಿಂಗ, ಶಾಂತವ್ವ ರಾಠೋಡ, ಆರತಿ ನಾಯ್ಕೋಡಿ, ಪುರಸಭೆ ಮಾಜಿ ಅಧ್ಯಕ್ಷ ಬಸಣ್ಣ ದೇಸಾಯಿ, ಹಣಮಂತ ನಾಯ್ಕೋಡಿ, ಮಲ್ಲೇಶಿ ಚಿಕ್ಕೂರ, ಚಂದ್ರಶೇಖರ ಕಲ್ಲೂರ, ರಾಮು ಕಟ್ಟಿಮನಿ, ಅಪ್ಪಾಸಾಹೇಬ ಕಲ್ಲೂರ, ಮಲ್ಲು ಜೈನಾಪುರ, ರಮೇಶ ನಾಯ್ಕೋಡಿ, ಅಣ್ಣು ಕುಂಬಾರ, ಬಸವರಾಜ ಸಂಗಮ, ಬಸವರಾಜ ಬನಾಸಿ, ಮಹಾಂತೇಶ ಮಿಣಜಗಿ ಸೇರಿದಂತೆ ಇತರರು ಭಾಗವಹಿಸಿದ್ದರು.

# ಸಮಾಜಕ್ಕೆ ಕೊಡುಗೆ ಕೊಟ್ಟವರನ್ನು ಸ್ಮರಿಸಬೇಕು :ಕಲ್ಯಾಣಶೆಟ್ಟಿ

ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ಸಮಾಜಕ್ಕೆ ಕೊಡುಗೆ ಕೊಟ್ಟ ಮಹನೀಯರನ್ನು ಎಲ್ಲ ಕಾಲಕ್ಕೂ ಸಮಾಜ ಸ್ಮರಿಸುವ ಮೂಲಕ ಅವರಿಗೆ ಗೌರವ-ನಮನ ಸಲ್ಲಿಸಬೇಕಾದ ಕರ್ತವ್ಯವಾಗಿದೆ ಎಂದರೆ ತಪ್ಪಾಗಲಾರದು ಎಂದು ಭಾರತೀಯ ಜೀವ ವಿಮಾ ನಿಗಮದ ನಿವೃತ್ತ ಅಧಿಕಾರಿ, ಸಾಹಿತಿ ವಿವೇಕಾನಂದ ಕಲ್ಯಾಣಶೆಟ್ಟಿ ಹೇಳಿದರು.

ಪಟ್ಟಣದ ಅಕ್ಕನಾಗಮ್ಮ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಕೂಡಲಸಂಗಮ ಅಭಿವೃದ್ಧಿ ಮಂಡಳಿಯು ಬುಧವಾರ ಹಮ್ಮಿಕೊಂಡಿದ್ದ ಬಸವೇಶ್ವರ ದೇವಾಲಯ ಸಂಸ್ಥೆಯ ಮೂಲ ಸಂಸ್ಥಾಪಕ ನಿವೃತ್ತ ಮಾಮಲೇದಾರ ಲಿಂ. ಮಲ್ಲಪ್ಪ ಶಂಕ್ರೆಪ್ಪ ಸಿಂಹಾಸನ ಅವರ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, ಸಮಾಜಕ್ಕೆ ಕೊಡುಗೆ ಕೊಟ್ಟವರ ಸಾಲಿನಲ್ಲಿರುವ ಅಮೀನಗಡದ ನಿವೃತ್ತ ಮಾಮಲೇದಾರ ಲಿಂ. ಮಲ್ಲಪ್ಪ ಶಂಕ್ರೆಪ್ಪ ಸಿಂಹಾಸನ ಅವರು ತಮ್ಮ ನಿವೃತ್ತಿಯ ನಂತರ ಬಸವೇಶ್ವರ ದೇವಾಲಯ ಸಂಸ್ಥೆಯ ಮೂಲಸಂಸ್ಥಾಪಕರಾಗಿ ಬಸವೇಶ್ವರ ದೇವಸ್ಥಾನದ ಮೂಲ ಜೀರ್ಣೋದ್ಧಾರಕರಾಗಿ ಧಾರ್ಮಿಕ ಕ್ಷೇತ್ರದ ಕಾರ್ಯ ಮಾಡಿದ್ದಾರೆ. ಇವರು ಆರಂಭದಲ್ಲಿ ತಾವು ದೇಣಿಗೆ ನೀಡಿ ನಂತರ ಸಮಾಜದಲ್ಲಿರುವ ಎಲ್ಲ ಬಾಂಧವರ ದೇಣಿಗೆ ಸಹಾಯದೊಂದಿಗೆ ಬಸವೇಶ್ವರ ಜನ್ಮಸ್ಥಳ ಬಸವನಬಾಗೇವಾಡಿಯ ಬಸವೇಶ್ವರ ದೇವಾಲಯದ ಜೀರ್ಣೋದ್ಧಾರ, ದೇವಾಲಯದ ಸುತ್ತಲೂ ಕಲ್ಲು ನಿರ್ಮಿತ ಅತ್ಯಾಕರ್ಷಕ ಆವರಣಗೋಡೆ ನಿರ್ಮಾಣ ಸೇರಿದಂತೆ ಇತರೇ ಕಟ್ಟಡಗಳ ನಿರ್ಮಾಣ ಕಾರ್ಯ ಮಾಡಿದ್ದಾರೆ. ಇವರ ನಿಸ್ವಾರ್ಥ-




ರ್ಥ ಸೇವೆಯನ್ನು ಗುರುತಿಸಿದ ಅಂದಿನ ಬ್ರಿಟಿಷ್ ಸರ್ಕಾರ ಇವ-ರಿಗೆ ರಾವ್ಸಾಹೇಬ ಎಂಬ ಬಿರುದು ನೀಡಿತ್ತು. ಇಂತಹ ಮಹನೀಯರ ತತ್ವದಾರ್ಶಗಳನ್ನು ಇಂದಿನ ಪೀಳಿಗೆ ಅರಿತು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದ ಅವರು ಲಿಂ. ಮಲ್ಲಪ್ಪ ಶಂಕ್ರೆಪ್ಪ ಸಿಂಹಾಸನ ಅವರ ಜೀವನದಲ್ಲಿ ನಡೆದ ಕೆಲ ಘಟನೆಗಳನ್ನು ಸ್ಮರಿಸಿಕೊಂಡರು.

ನಿವೃತ್ತ ಶಿಕ್ಷಕ ಎಫ್.ಡಿ.ಮೇಟಿ ಮಾತನಾಡಿ, ನಾವು ನಮ್ಮ ಶರೀರದಿಂದ ಸಮಾಜದಲ್ಲಿ ಗೆಲುವು ಸಾಧಿಸಲು ಸಾಧ್ಯವಿಲ್ಲ. ನಮ್ಮ ಕರ್ತವ್ಯದಿಂದ ಸಮಾಜವನ್ನು ಗೆಲ್ಲಬಹುದು. ಅನೇಕ ಮಹನೀಯರು ತಮ್ಮ ಪ್ರಾಮಾಣಿಕ ಕರ್ತವ್ಯ, ನಿಸ್ವಾರ್ಥ ಸೇವೆಯಿಂದ ಸಮಾಜದಲ್ಲಿ ಸದಾ ಸ್ಮರಣೀಯರಾಗಿದ್ದಾರೆ. ಸಮಾಜವು ಎಲ್ಲ ದಾರ್ಶನಿಕರನ್ನು, ಮಹಾನ್ ವ್ಯಕ್ತಿಗಳನ್ನು ಸ್ಮ-ರಿಸುತ್ತದೆ ಎಂದ ಅವರು ನಾನು ಈ ಊರಿಗೆ ಶಿಕ್ಷಕನಾಗಿ ಬಂದ ಆರಂಭದ ದಿನಗಳಲ್ಲಿ ಲಿಂ.ಮಲ್ಲಪ್ಪ ಸಿಂಹಾಸನ ಅವರು ದೇವಾಲಯದ ಸಂಬಂಧಿಸಿದಂತೆ ಮಾಡುತ್ತಿದ್ದ ಕಾರ್ಯಗಳನ್ನು ನಾನು ನೋಡಿದ್ದು, ಅವರ ಕಾರ್ಯ ವೈಖರಿಯ ಕು-ರಿತು ಸ್ಮರಿಸಿಕೊಂಡರು. ಸಿಂಹಾಸನರ ವಂಶಸ್ಥ, ನಿವೃತ್ತ ಕೃಷಿ ಅಧಿಕಾರಿ ಎಂ.ಎಸ್.ಸಿಂಹಾಸನ ಮಾತನಾಡಿ, ನಮ್ಮ ಮುತ್ತಜ್ಜನವರು ಮಾಡಿದ ಕಾರ್ಯ ಸ್ಮರಣೀಯವಾಗಿದೆ. ಇಂದು ಡಾ.ಎಸ್.ಎಂ. ಜಾಮದಾರ ಅವರು ಸಹ ಈ ದೇವಾಲಯ ಪುನರ್ ಜೀರ್ಣೋದ್ಧಾರ ಮಾಡಿದ್ದಾರೆ. ಇವರ ಕಾರ್ಯವನ್ನು ಇಲ್ಲಿ ಸ್ಮ-ರಿಸಬೇಕಿದೆ ಎಂದರು.

ಸಾಹಿತಿ ಮಹಾಂತೇಶ ಸಂಗಮ ಪ್ರಾಸ್ತವಿಕವಾಗಿ ಮಾತನಾಡಿ, 2011 ರಲ್ಲಿ ನಂದಿ ಸಾಹಿತ್ಯ ವೇದಿಕೆ ಈ ಪುಣ್ಯ ಸ್ಮರಣೆ ಕಾರ್ಯಕ್ರಮ ಸಾರ್ವಜನಿಕ ಕಾರ್ಯಕ್ರಮ ಆಯೋಜನೆ ಮಾಡುವ ಮೂಲಕ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದೆ. ಈಗ ಮಂಡಳಿಯು ಮುನ್ನೆಡೆಸಿಕೊಂಡು ಹೋಗುತ್ತಿದೆ. ಲಿಂ. ಮಲ್ಲಪ್ಪ ಸಿಂಹಾಸನ ಅವರ ಪ್ರತಿಮೆ ಸುತ್ತ ಸಣ್ಣ ಉದ್ಯಾನವನ ನಿರ್ಮಾಣವಾಗಬೇಕು ಸೇರಿದಂತೆ ವಿವಿಧ ಯೋಜನೆಗಳ ಕುರಿತು ಮಂಡಳಿಗೆ ಮನವಿ ಸಲ್ಲಿಸಲಾಗಿದೆ. ಈ ಕುರಿತು ಮಂಡಳಿಯು ಗಮನ ಹರಿಸಬೇಕಿದೆ ಎಂದರು.

ಸಾನಿಧ್ಯ ವಹಿಸಿದ್ದ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ನಾಡಿನಲ್ಲಿ ಅನೇಕ ಮಹನೀಯರು ವಿದ್ಯಾಸಂಸ್ಥೆ, ಮಠ-ಮಂದಿರಗಳನ್ನು ಕಟ್ಟಿದ ಫಲವಾಗಿ ಸಮಾಜಕ್ಕೆ ಸಾಕಷ್ಟು ಸದುಪಯೋಗವಾಗಿದೆ. ನಾಡಿನಲ್ಲಿ ಕೆಎ[illegible] ಸಂಸ್ಥೆಯ ಕಟ್ಟಲು ಲಿಂಗರಾಜ ದೇಸಾಯಿ, ಬಿಎಲ್ಡಿಇ ಸಂಸ್ಥೆಯ ಕಟ್ಟಲು ಬಂಥ-ನಾಳದ ಶ್ರೀಗಳು, ಬಾಗಲಕೋಟದ ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಯ ಕಟ್ಟಲು ಬೀಳೂರಿನ ಶ್ರೀಗಳ ಕೊಡುಗೆ ಮರೆಯುವಂತಿಲ್ಲ. ಇಂತಹ ಮಹಾತ್ಮರು ಸಮಾಜಕ್ಕೆ ಸದಾ ಪ್ರೇರಣಾದಾಯಕ ಶಕ್ತಿಯಾಗಿದ್ದಾರೆ. ಮನುಷ್ಯನಿಗೆ ಮರೆಯುವ ಸ್ವಭಾವ ಸಹಜ. ಸಮಾಜಕ್ಕೆ ಕೊಡುಗೆ ನೀಡಿದ ಮಹಾತ್ಮರನ್ನು ಸಮಾಜ ಎಂದಿಗೂ ಮರೆಯಬಾರದು. ಲಿಂ. ಮಲ್ಲಪ್ಪ ಶಂಕ್ರೆಪ್ಪ ಸಿಂಹಾಸನ ಅವರು ಬಸವನಬಾಗೇವಾಡಿಗೆ ಕೊಟ್ಟ ಕೊಡುಗೆಯನ್ನು ಎಂದಿಗೂ ಮರೆಯಬಾರದು ಎಂದರು.

ಈಚೆಗೆ ಸರ್ಕಾರ ಬಸವೇಶ್ವರ ಜನ್ಮಸ್ಥಳ ಬಸವನಬಾಗೇವಾಡಿ ಅಭಿವೃದ್ಧಿಗೆ ಪ್ರತ್ಯೇಕ ಪ್ರಾಧಿಕಾರ ಘೋಷಣೆ ಮಾಡಿದೆ. ಅದು ಅನುಷ್ಠಾನವಾಗಿ ಕೂಡಲೇ ಅಭಿವೃದ್ಧಿ ಕಾರ್ಯಗಳಾಗಬೇಕು. ಪ್ರತಿವರ್ಷ ಬಸವ ಜಯಂತಿಯಂದು ಈ ನೆಲದಲ್ಲಿ ರಾಷ್ಟ್ರೀಯ ಬಸವಜಯಂತಿ ಆಚರಣೆಯಾಗಬೇಕಿದೆ. ಈ ನಿಟ್ಟಿನಲ್ಲಿ ಜನರು ಇಚ್ಛಾಶಕ್ತಿಯನ್ನು ತೋರಿಸಿ ರಾಷ್ಟ್ರೀಯ ಬಸವ ಜಯಂತಿ ಆಚರಣೆಗೆ ಉತ್ಸಾಹ ತೋ-ರಿಸಬೇಕೆಂದರು.

ಅಧ್ಯಕ್ಷತೆಯನ್ನು ಮಂಡಳಿಯ ಅಭಿಯಂತರ ಡಿ.ಎಸ್.ಹಿರೇಮಠ ವಹಿಸಿದ್ದರು.

ಶರಣು ಬಸ್ತಾಳ ಪ್ರಾರ್ಥಿಸಿದರು. ಎಸ್.ಕೆ.ಸೋಮನಕಟ್ಟಿ ಸ್ವಾಗತಿಸಿದರು. ಬಸವರಾಜ ನಂದಿಹಾಳ ನಿರೂಪಿಸಿದರು. ಪಿ.ಎಲ್.ಹಿರೇಮಠ ವಂದಿಸಿದರು.

ಕಾರ್ಯಕ್ರಮಕ್ಕೂ ಮುನ್ನ ದೇವಾಲಯದ ಹೊರಆವರಣದಲ್ಲಿರುವ ಲಿಂ.ಮಲ್ಲಪ್ಪ ಶಂಕ್ರೆಪ್ಪ ಸಿಂಹಾಸನ ಅವರ ಪ್ರತಿಮೆಗೆ ಪೂಜೆ ಸಲ್ಲಿಸಲಾಯಿತು.

# ವಿರಕ್ತಮಠದಲ್ಲಿ ಅಕ್ಕಮಹಾದೇವಿಯ ತೊಟ್ಟಿಲೋತ್ಸವ

ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ಪಟ್ಟಣದ ವಿರಕ್ತಮಠದಲ್ಲಿ ವೈರಾಗ್ಯನಿಧಿ ಅಕ್ಕಮಹಾದೇವಿಯ ಜಯಂತಿಯಂಗವಾಗಿ ಮಂಗಳವಾರ ವಿವಿಧ ಅಕ್ಕನ ಬಳಗದ ಸದಸ್ಯರು ಶ್ರೀಮಠದ ಸಿದ್ದಲಿಂಗ ಸ್ವಾಮೀಜಿ ಸಾನಿಧ್ಯದಲ್ಲಿ ತೊಟ್ಟಿಲೋತ್ಸವ ನೆರವೇರಿಸಿ ಅಕ್ಕಮಹಾದೇವಿಗೆ ನಮನ ಸಲ್ಲಿಸಿದರು.

ಶ್ರೀಮಠದ ಅಕ್ಕಮಹಾದೇವಿ ಅಕ್ಕನಬಳಗ, ಮುಕ್ತಾಯಕ್ಕ ಅಕ್ಕನಬಳಗ, ದಾನಮ್ಮದೇವಿ ಅಕ್ಕನಬಳಗ, ಕ್ವಾಟಿಲಕ್ಷ್ಮೀ ನಗರದ ಅಕ್ಕನಬಳಗ, ಗಂಗಾಂಬಿಕಾ ಅಕ್ಕನಬಳಗ ಸದಸ್ಯರು ಬಾಲ ಅಕ್ಕಮಹಾದೇವಿ ಮೂರ್ತಿಯನ್ನು ಸಂಪ್ರದಾಯದಂತೆ ತೊಟ್ಟಿಲಲ್ಲಿ ಹಾಕಿ ನಾಮಕರಣ ಮಾಡುವ ತೊಟ್ಟಿಲೋತ್ಸವ ನೆರವೇರಿಸಿದರು. ತೊಟ್ಟಿಲ ಕೆಳಗೆ ಶಕುಂತಲಾ ಝುಳಕಿ, ಸರಸ್ವತಿ ನಾಯ್ಕೋಡಿ



ಕುಳಿತುಕೊಂಡಿದ್ದರು.

ಸಾನಿಧ್ಯ ವಹಿಸಿದ್ದ ಶ್ರೀಮಠದ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, 12 ನೇ ಶತಮಾನದಲ್ಲಿ ಶರಣ ಸಂಕುಲೆಯಲ್ಲಿದ್ದ ಅಕ್ಕಮಹಾದೇವಿ ಕನ್ನಡ ಸಾಹಿತ್ಯದ ಮೊದಲ ಕವಯತ್ರಿ. ಅಕ್ಕಮಹಾದೇವಿಯು ಉಡುತಡಿಯಲ್ಲಿ ಜನಿಸಿ ಸುಖ, ಸಂಪತ್ತು ತ್ಯಜಿಸಿ ಬಸವ ಕಲ್ಯಾಣದಲ್ಲಿದ್ದ ಅನುಭವ ಮಂಟಪಕ್ಕೆ ಬಂದು ತನ್ನ ವ್ಯಕ್ತಿತ್ವ ಸಾಬೀತು ಪಡಿಸುವ ಮೂಲಕ ವೈರಾಗ್ಯ ನಿಧಿ ಎನಿಸಿಕೊಂಡಳು. ಕದಳಿವನದಲ್ಲಿ ಬಯಲಾದಳು. ಇಂತಹ ವೈರಾಗ್ಯ ನಿಧಿ ಇಡೀ ಮನುಕುಲಕ್ಕೆ ಆದ-ರ್ಶಪ್ರಾಯವಾಗಿದ್ದಾಳೆ. ಅಕ್ಕ ರಚಿಸಿರುವ ವಚನಗಳು ವೈರಾಗ್ಯ ಮತ್ತು ಆತ್ಮಪ್ರಜ್ಞೆಗೆ ಸಾಕ್ಷಿಯಾಗಿವೆ. ಅಕ್ಕನ ಆದರ್ಶವನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕೆಂದರು.

ತೊಟ್ಟಿಲೋತ್ಸವ ಕಾರ್ಯಕ್ರಮದಲ್ಲಿ ಮಹಾದೇವಿ ಬಿರಾದಾರ, ಪುಷ್ಪಾ ಹೂಗಾರ, ಪುಷ್ಪಾ ಬಿರಾದಾರ, ನೀಲಮ್ಮ ಝುಳಕಿ, ಅನ್ನಕ್ಕ ಚಿಂಚೋಳಿ, ಲಲಿತಾ ಪಡಶೆಟ್ಟಿ, ಬಾಲಕ್ಕ ಬೆಣ್ಣೂರ, ದ್ರಾಕ್ಷಾಯಿಣಿ ಮಟ್ಟಿಹಾಳ, ಶೈಲಾ ಮಠ ಇತರರು ಭಾಗವಹಿಸಿದ್ದರು.

# ಕೊಣ್ಣೂರ-ಹೂವಿನಹಿಪ್ಪರಗಿ ರಸ್ತೆ ಕಾಮಗಾರಿಗೆ ಆಗ್ರಹಿಸಿ ಮನವಿ

ಉದಯರಶ್ಮಿ ನ್ಯೂಸ್



ಮುದ್ದೇಬಿಹಾಳ: ತಾಳಿಕೋಟೆ ತಾಲೂಕಿನ ಕೊಣ್ಣೂರ ಗ್ರಾಮಸ್ಥರ ಬಹು ದಿನಗಳ ಬೇಡಿಕೆಯಾದ ಕೊಣ್ಣೂರ-ಹೂವಿನಹಿಪ್ಪರಗಿ ಕೂಡುವ ರಸ್ತೆ ಕಾಮಗಾರಿ ಕೈಗೊಳ್ಳುವಂತೆ ಆಗ್ರಹಿಸಿ ಕೊಣ್ಣೂರ ಗ್ರಾಮದ ರೈತರು, ಹಿರಿಯರು, ಹೋರಾಟಗಾರರು, ಮುಖಂಡರು ಶಾಸಕ ಸಿ.ಎಸ್.ನಾಡಗೌಡರಿಗೆ ಮನವಿ ಮಾಡಿಕೊಂಡರು.

ಪಟ್ಟಣದ ಹುಡ್ಕೋ ಬಡಾವಣೆಯಲ್ಲಿರುವ ಶಾಸಕರ ನಿವಾಸದಲ್ಲಿ ಈ ಬಗ್ಗೆ ಮನವಿ ಮಾಡಿಕೊಂಡರು.

ಮನವಿಗೆ ಸ್ಪಂದಿಸಿದ ಶಾಸಕರು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳೊಂದಿಗೆ ಸ್ಥಳದಲ್ಲಿಯೇ ದೂರವಾಣಿಯ ಮೂಲಕ ಮಾತನಾಡಿ, ಶೀಘ್ರವಾಗಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವದಾಗಿ ಭರವಸೆಯನ್ನು ನೀಡಿದರು.

ಈ ವೇಳೆ ಅಸ್ಕಿ ಫೌಂಡೇಶನ ಅಧ್ಯಕ್ಷ ಸಿ.ಬಿ.ಅಸ್ಕಿ, ಗ್ರಾಮದ ಹಿರಿಯ ಮುಖಂಡರಾದ ಬಸವರಾಜ ಹಡಲಗೇರಿ, ನಿವೃತ ಶಿಕ್ಷಕ ಉ.ಉ.ಅಸ್ಕಿ, ಬಾಲನಗೌಡ ಬಿರಾದಾರ, ಚಂದ್ರಶೇಖರ ಇಂಗಳಗಿ, ಸುಭಾಸ ತಾಳಿಕೋಟಿ, ಗಂಗಣ್ಣ ಬಡಿಗೇರ, ಮಕ್ತುಮಸಾಬ ಅವಟಿ, ಮಶ್ಯಾಕ ಅವಟಿ, ರಮೇಶ ಕೊಟಗಿ, ಬಸನಗೌಡ ಪಾಟೀಲ, ಬಾಪೂಗೌಡ ನೀರಲಗಿ, ಮಂಜುನಾಥ ಶಿನ್ನೂರ, ಸಿದ್ದಪ್ಪ ಶಿರಕನಳ್ಳಿ, ಮಾಂತಗೌಡ ಏವೂರ, ಅಭಿಷೇಕ ಹಡಲಗೇರಿ, ಶ್ರೀಕಾಂತ ಅಸ್ಕಿ, ಪ್ರಕಾಶ ಅಸ್ಕಿ, ವೀರೇಶ ಅಸ್ಕಿ ಸೇರಿದಂತೆ ಮತ್ತೀತರರು ಭಾಗಿಯಾಗಿದ್ದರು.

# ಚಹಾ-ಚೋಡಾ ಸವಿಯುತ್ತ ಜನಾಭಿಪ್ರಾಯ ಕೇಳಿದ ಜಿಗಜಿಣಗಿ



ಉದಯರಶ್ಮಿ ನ್ಯೂಸ್

ವಿಜಯಪುರ: ವಿಜಯಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ಸಂಸದ ರಮೇಶ ಜಿಗಜಿಣಗಿ ಅವರು ತಮ್ಮ ಚುನಾವಣಾ ಪ್ರಚಾರದ ಒತ್ತಡದ ನಡುವೆಯೂ ನಗರದ ಬಬಲೇಶ್ವರ ನಾಕಾದ ಬಳಿಯ ಹೊಟೇಲ್ ಒಂದರಲ್ಲಿ ಜನಸಾಮಾನ್ಯರೊಂದಿಗೆ ಸಾಮಾನ್ಯರಾಗಿ ಚಹಾ,ಚೂಡಾ ಸವಿದು ಕೆಲ ಹೊತ್ತು ಅಲ್ಲಿದ್ದ ಜನರೊಂದಿಗೆ ಆತ್ಮೀಯವಾಗಿ ಬೆರೆತು ಮಾತನಾಡಿದರು.

ವ್ಯಕ್ತಿ ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ತಾನು ಸಾಗಿ ಬಂದ ಹಾದಿ ಹಾಗೂ ಬೆಳೆಯಲು ಕೈ ಹಿಡಿದವರನ್ನು ಎಂದಿಗೂ ಮರೆಯಬಾರದು ಎನ್ನುವ ಮಾತಿನಂತೆ ಹಿರಿಯ ಸಂಸದ, ಜನಸಾಮಾನ್ಯರ ಎಂಪಿ ರಮೇಶ ಜಿಗಜಿಣಗಿ ಅವರು ತಮ್ಮ ಸುದೀರ್ಘ 45-50 ವರ್ಷಗಳ ರಾಜಕಾರಣದ ಹಾದಿಯಲ್ಲಿ ಎಪ್ಪಾ, ಕಾಕಾ, ಬಾಬಾ, ಅಣ್ಣಾ ಎನ್ನುತ್ತಲೇ ಹಿರಿಯ ಕಿರಿಯರೊಂದಿಗೆ ಆತ್ಮೀಯತೆಯಿಂದ ಬೆರೆತು ಅವರ ಕಷ್ಟಸುಖಗಳಿಗೆ ಸ್ಪಂದಿಸಿಸುತ್ತಾ ಬಂದಿರುವ ಸರಳ ಸಜ್ಜನಿಕೆಯ ರಾಜಕಾರಣಿ.

ಅವರು ಬುಧವಾರ ನಗರದಲ್ಲಿ ಚುನಾವಣಾ ಪ್ರಚಾರದ ಒತ್ತಡದಲ್ಲೂ ಕೊಂಚ ಬಿಡುವು ಮಾಡಿಕೊಂಡು ಬಬಲೇಶ್ವರ ನಾಕಾದ ಹೊಟೇಲ್ ನಲ್ಲಿ ಚಹಾಚೂಡಾ ಸವಿದರು. ನಂತರ ಅಲ್ಲಿದ್ದ ಜನರೊಂದಿಗೆ ತಮ್ಮ ಅವಧಿಯಲ್ಲಿ ಜಿಲ್ಲೆಯಲ್ಲಾದ ನಾನ ಅಭಿವೃದ್ಧಿ ಕಾರ್ಯಗಳನ್ನು ವಿವರಿಸುತ್ತಾ ಮುಂದಾಗಬೇಕಿರುವ ಕೆಲಸಗಳ ಬಗ್ಗೆಯೂ ಜನಾಭಿಪ್ರಾಯ ಸಂಗ್ರಹಿಸಿದರು. ಅಲ್ಲದೇ ಕಳೆದ ಹತ್ತು ವರ್ಷಗಳ ಮೋದಿಯವರ ಆಡಳಿತದಲ್ಲಿ ಜನಸಾಮಾನ್ಯ-ರಿಗಾಗಿ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳು, ಯೋಜನೆಗಳನ್ನು ಸಹ ಜನರಿಗೆ ಮನದಟ್ಟು ಮಾಡಿಕೊಟ್ಟು ಈ ಬಾರಿಯೂ ತಮಗೆ ಮತಾಶಿರ್ವಾದ ನೀಡಿ ವಿಕಸಿತ ಭಾರತದ ಸಂಕಲ್ಪ ಹೊಂದಿರುವ ನರೇಂದ್ರ ಮೋದಿಯವರ ಕೈ ಬಲಪಡಿಸಬೇಕು ಎಂದು ಮನವಿ ಮಾಡಿಕೊಂಡರು.

ಈ ವೇಳೆ ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಮಾಜಿ ಎಂಎಲ್ಸಿ ಅರುಣ್ ಶಹಾಪುರ, ಪಾಲಿಕೆ ಸದಸ್ಯ ರಾಹುಲ್ ಜಾಧವ ಸೇರಿದಂತೆ ಅನೇಕರು ಜಿಗಜಿಣಗಿ ಅವರಿಗೆ ಸಾಥ್ ನೀಡಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ರಾಜು ಅನಂತಪುರ್ ಭೀಮ ಮಾಶಾಳ ವಿಜಯ ಜೋಶಿ ರಾಜೇಶ್ ತವ್ಸೆ ಶ್ರೀಕಾಂತ್ ಶಿಂದೆ ರೋಹನ್ ಅಪಟೆ ಅನಿಲ್ ಉಪ್ಪಾರ್ ಚನ್ನು ಚಿನಗುಂಡಿ ಗಂಗಾಧರ ಮಠ ವಿನಾಯಕ್ ಗೌಳಿ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.

# ತಡವಾದರೇನಂತೆ ನಷ್ಟವಿಲ್ಲ

## ಭಾವರಶ್ಮಿ



– ಮಂಜು ಅತ್ರೇಯ
("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

ನನ್ನ ವೃತ್ತಿ ಜೀವನ ಪ್ರಾರಂಭವಾದಾಗಿನಿಂದಲೂ ನನಗೊಂದು ಕನಸಿತ್ತು. ಮಧ್ಯಾಹ್ನದ ಊಟ ಸಾವಕಾಶವಾಗಿ ಮನೆಯಲ್ಲಿಯೇ ಆಗಬೇಕು. ಉಂಡು ಭುಕ್ತಾಯಾಸವನ್ನು ನೀಗಿಸಿಕೊಂಡು ಒಂದರೆ ಗಳಿಗೆ ಏನೂ ಮಾಡದೇ ಕಾಲು ಚಾಚಿ, ಪರಿವಾರದೊಂದಿಗೆ ಕುಳಿತು ಹರಟಬೇಕು ಅಲ್ಲಿಯೇ ಸಣ್ಣಗೆ ಜೋಂಪು ಹತ್ತಬೇಕು ಹಾಗೆಯೇ ಅಡ್ಡಾಗಿ ಹತ್ತಿಪ್ಪತ್ತು ನಿಮಿಷಗಳ ಕಿರುನಿದ್ದೆ ಹೊಡೆಯಬೇಕು ಎದ್ದು ಮುಖ ತೊಳೆದು ಅಮ್ಮನೋ ಹೆಂಡತಿಯೋ ಮಾಡಿಕೊಟ್ಟ ಕಾಫಿ ಕುಡಿದು ನವೋಲ್ಲಾಸ ಪಡೆದು ಮತ್ತೆ ಕೆಲಸಕ್ಕೆ ಮರಳಬೇಕು. ಅನಂತರದಲ್ಲಿ ಮೂರರಿಂದ ನಾಲ್ಕು ತಾಸು ಕೆಲಸ. ಮತ್ತೆ ರಾತ್ರಿ ಪರಿವಾರದೊಂದಿಗೆ ಊಟ , ಮಾತುಕತೆ ನಿದ್ದೆ.. ಹೀಗೊಂದು ಹಿತವಾದ ದಿನಚರಿಯ ಕನಸು.

ನಾನು ಹುಟ್ಟಿ ಬೆಳೆದದ್ದು ಬೆಂಗಳೂರಿನಲ್ಲಿ ಹೇಳಿಕೇಳಿ ಬೆಂಗಳೂರಿನಂತಾ ಬೆಂಗಳೂ-ರಿನಲ್ಲಿ ಇಂತಹ ಕನಸುಗಳನ್ನು ಕಾಣುವ ಕನಸೂ ಕಾಣುವುದು ಅಪರಾಧವೆಂಬಂಥ ಧಾವಂತದ ಜೀವನ ಶೈಲಿ, ಮೇಲೆ ಧಾವಂತಕ್ಕೆ ಕಳಶವಿಟ್ಟಂತೆ ಟ್ರಾಫಿಕ್. ವೃತ್ತಿ ಜೀವನದ ಶುರುವಾತಿನಿಂದಲೇ ಮನೆಯಿಂದ ಸುಮಾರು ಇಪ್ಪತ್ತು ಇಪ್ಪತ್ತೈದು ಕಿಲೋಮೀಟರು ದೂರದ ಕೆಲಸದ ಸ್ಥಳ. ಅಲ್ಲಿಗೆ ಬೆಳಿಗ್ಗೆ ಹೊರಟು ರಾತ್ರಿ ಮರಳಿ ಮನೆಗೆ ಬರುವುದೇ ಹರಸಾಹಸ ಅಂಥದ್ದರಲ್ಲಿ ಹೀಗೆ ನಡು ಮಧ್ಯಾಹ್ನದ ವಿರಾಮದ ಕನಸಿಗೆ ತಾವೆಲ್ಲಿ ? ಏನೇ ಕನಸುಗಳಿದ್ದರೂ ಅದನ್ನು ವಾರಾಂತ್ಯಕ್ಕೆ ದಬ್ಬುವ ಅನಿವಾರ್ಯತೆ.

ಇನ್ನು ಮಧ್ಯಾಹದ ಊಟಕ್ಕೆ ಡಬ್ಬಿ. ಪಾಪ ಅಮ್ಮ ಅಥವಾ ಹೆಂಡತಿ ಅದೆಷ್ಟೇ ಮುತುವರ್ಜಿಯಿಂದ ಮಾಡಿಕೊಟ್ಟರೂ ಲ್ಯಾಪ್ ಟಾಪ್ ಬ್ಯಾಗಿನ ಮೂಲೆಯಲ್ಲಿ ಕುಳಿತು ಎಷ್ಟೋ ಬಾರಿ ಒಣಗಿ , ಕೆಲವೊಮ್ಮೆ ಸೋರಿ ,ಚೆಲ್ಲಿ ತಿನ್ನಲು ಆಗದ ಸ್ಥಿತಿ. ಹೊರಗೆ ತಿನ್ನಲು ಮನಸ್ಸಿಲ್ಲದೇ ಮನೆಯಲ್ಲಿ ಮಾಡಿಕೊಟ್ಟ ಊಟ ಸರಿಯಾಗಿ ದಕ್ಕದೇ ಒದ್ದಾಡಿದ ದಿನಗಳೆಷ್ಟೋ.

ವೃತ್ತಿ ಜೀವನದ ಹಂತಗಳಲ್ಲಿ ಮೇಲೇರಿದಂತೆಲ್ಲಾ ನನ್ನ ಈ ಕನಸು ಇನ್ನಷ್ಟು ದೂರವಾದಂತೆಯೇ ಭಾಸವಾಗುತ್ತಿತ್ತು. ಕೋವಿಡ್




ಸಮಯದಲ್ಲಿ ಮನೆಯಿಂದಲೇ ಕೆಲಸ ಮಾಡುವ ಅವಕಾಶವಿದ್ದರೂ ವೃತ್ತಿ ಮತ್ತು ವೈಯಕ್ತಿಕ ಜೀವನಗಳೆರಡೂ ಕಸುಮೇಲೋಗರವಾಗಿ ವೈಯಕ್ತಿಕ ಜೀವನದ ಮೇಲೆ ವೃತ್ತಿ ಜೀವನವೇ ಮೇಲುಗೈ ಪಡೆದು ದಿನಕ್ಕೆ ಹದಿನಾರರಿಂದ ಹದಿನೆಂಟು ಘಂಟೆ ಕೆಲಸ ಮಾಡುವ ಸ್ಥಿತಿ ಬಂದೊದಗಿ ಇನ್ನಾಗದು ಎಂದು ನಿರ್ಧರಿಸುವಷ್ಟರಲ್ಲಿ ಮಗರಾಯ ಹುಟ್ಟಿಯಾಗಿತ್ತು.

ಎಲ್ಲಿಗೆ ಹೋಗುವುದು? ಕೈಯಲ್ಲೇನೋ ವಿದ್ಯೆಯಿದೆ ಆದರೆ ಹೊಸತಾಗಿ ಬದುಕು ಕಟ್ಟಿಕೊಳ್ಳಲು ಧೈರ್ಯವೂ ತಾಳ್ಮೆಯೂ ಬೇಕೇಬೇಕು. ಅದೇ ಹೊತ್ತಿನಲ್ಲಿ ಕೈಬೀಸಿ ಕರೆದದ್ದು ಬಳ್ಳಾರಿ. ನನ್ನ ವಿದ್ಯೆಗೆ ತಕ್ಕುದಾದ ಆದರೆ ಅಷ್ಟೇನೂ ಒಳ್ಳೆಯ ಸಂಭಾವನೆಯಿಲ್ಲದ ಕಾರ್ಯ, ಕೈ ಹಾಕಿಯೇ ಬಿಡೋಣವೆಂದು ಮಡದಿಯಲ್ಲಿ ಕೇಳಿದೆ. ನೀವಿದ್ದಲ್ಲಿ ನಾನು ಎಂದಳು ಚೆಲುವೆ. ಸರಿ,ಇನ್ನೇನು! ವರ್ಷದ ಕೂಸನ್ನು ಎತ್ತಿಕೊಂಡು ಊರುಬಿಟ್ಟೆವು.

ಪಟ್ಟಣದ ಹೊರವಲಯದಲ್ಲಿ ಮನೆ. ನನ್ನ ಮನೆಗೂ ನನ್ನ ಕಚೇ-ರಿಗೂ ಮೂರು ಕಿಲೋಮೀಟ-ರಿನಷ್ಟು ದೂರ. ಬಳ್ಳಾರಿಗರಿಗೆ ಇದು ದೂರವೇ ಆದರೆ ನಾನು ಹೇಳಿಕೇಳಿ ಬೆಂಗಳೂರಿಗ ಅಲ್ಲಿನ ಓಡಾಟ ನೋಡಿದವರಿಗೆ ಇದು ಏನೇನೂ ಅಲ್ಲ.

ಬಳ್ಳಾರಿಯಂತಹ ಊರಿನ ಅನುಕೂಲವೆಂದರೆ ಜನ ಬಹಳ ಬೇಗ ಹತ್ತಿರವಾಗಿಬಿಡುತ್ತಾರೆ. ಅದರಲ್ಲೂ ಬೆಂಗಳೂರಿನಿಂದ ಬಂದ ವಿದ್ಯಾವಂತರೆಂದರೆ ಇಲ್ಲಿನ ಜನಕ್ಕೇನೋ ಆದರಾಭಿಮಾನ. ಇಂತಹ ಅಭಿಮಾನದ ಸ್ನೇಹದ ಹೊಳೆಯಲ್ಲಿಳಿದು ಈ ಅಕ್ಟೋಬರಕ್ಕೆ ಮೂರು ವರ್ಷಗಳು.

ಇಲ್ಲಿನ ಬಿರು ಬಿಸಿಲಿಗೆ ಬಹತೇಕ ವ್ಯಹಾರಗಳು ಮಧ್ಯಾಹ್ನ ಮುಚ್ಚಿಯೇ



ಮುಚ್ಚಿರುತ್ತವೆ. ಹಾಗಾಗಿ ಮಧ್ಯಾಹ್ನದ ಬಿಡುವು ಇಲ್ಲಿ ಬಯಸದೇ ಬಂದ ಭಾಗ್ಯ ಎನ್ನುವುದು ನನಗೆ ಇಲ್ಲಿ ಬರುತ್ತಲೇ ತಿಳಿಯಿತು.

ಇನ್ನೇನು, ನನ್ನ ಆಸೆಯ ರೊಟ್ಟಿ ಜಾರಿ ತುಪ್ಪದಲ್ಲಿ ಅಲ್ಲಲ್ಲ ಜೇನುತುಪ್ಪದಲ್ಲಿ ಬಿದ್ದಂತೆ ಅನ್ನಿಸಿತು. ಹೀಗೇ ಕಳೆದ ಸುಮಾರು ಎರಡೂವರೆ ವರ್ಷಗಳಿಂದ ಮಧ್ಯಾಹ್ನದ ಬಿಸಿಯೂಟ ಮನೆಯಲ್ಲೇ. ಲಕ್ಷಣವಾಗಿ ಪಂಚೆಯುಟ್ಟು, ನೆಲದ ಮೇಲೆ ಕುಳಿತು ಕುಟುಂಬದೊಂದಿಗೆ ಉಣ್ಣುವ ಸುಖ!

ಆಹಾ! ವರ್ಣಿಸಲು ನನ್ನಲ್ಲಿ ಪದಗಳ ಕೊರತೆಯಿದೆ.

ಈಗ ನಾನು ವಾರಾಂತ್ಯಗಳಿಗೆ ಕಾಯುವುದಿಲ್ಲ. ಮಧ್ಯಾಹ್ನದ ಬಿಸಿಯೂಟ ಮೈಯಲ್ಲಿ ಹೊಸ ಕಸುವು ತುಂಬಿದೆ.

ಸುಖ ಎನ್ನುವುದು ನಾಳೆಯ ಕನಸಿನಲ್ಲಿಲ್ಲ, ಅದಿರುವುದು ನಾಳೆಗೆ ನಿನ್ನೆಯಾಗುವ ಇಂದಿನಲ್ಲಿ ಎನ್ನುವುದು ನನ್ನ ಮತ.

ಬೆಳಗಿನ ಹೊತ್ತು ಎಳೆಗೂಸಾದರೆ, ರಾತ್ರಿ ಎಂಬುದು ಹಿರಿಯನಂತೆ ನಡುಮಧ್ಯಾಹ್ನ ಯೌವನದ ಪರ್ವ ಕಾಲದಂತೆ.

ಇಷ್ಟೆಲ್ಲಾ ಬರೆಯಲು ಎರಡೂವರೆ ವರ್ಷಗಳು ಬೇಕಾದುವೆ! ಎಂದಿರಾ? ಇಷ್ಟು ದಿನಗಳಲ್ಲಿ ಮಧ್ಯಾಹ್ನಗಳು ಮನೆಯ ಮುಂದಿರುವ ಬೇವಿನ ಮರದ ನೆರಳಿನಲ್ಲಿ ಮನೆಯಂಗಳದ ಜಗುಲಿಯಲ್ಲೋ, ಮನದನ್ನೆಯೊಡನೆ ಮಾತಿನ ಸಲ್ಲಾಪದಲ್ಲೋ, ನನ್ನ ಮೂರುವರೆ ವರ್ಷದ ಕೂಸಿನೊಂದಿಗಿನ ಚಿನ್ನಾಟದಲ್ಲೋ, ಓಣಿಯ ಹುಡುಗರೊಂದಿಗಿನ ಆಟದಲ್ಲೋ, ಭೂರಿ ಭೋಜನವಾದಾಗ ಗಡದ್ದು ನಿದ್ದೆಯಲ್ಲೋ ಕಳೆದು ಹೋದದ್ದೇ ತಿಳಿಯುತ್ತಿರಲಿಲ್ಲ. ಇದನ್ನು ಬರೆಯುವ ಬಯಕೆ ಬಹಳ ದಿನಗಳದ್ದು, ಇವತ್ತು ಈ ಹಪಿ ಹೆಚ್ಚಾಯಿತು, ಹಾಗಾಗಿ ಬರೆದೆ.

ಒಲವಿನ ಕವಿ ಕೆ. ಎಸ್. ನರಸಿಂಹಸ್ವಾಮಿಯವರ "ಶಾನುಭೋಗರ ಮಗಳು" ಎಂಬೊಂದು ಕವಿತೆಯಲ್ಲಿ ಬರುವ ನಾಯಕಿ ಸೀತೆಯ ಮದುವೆಯ ಕುರಿತು ಕವಿ ಹೀಗೆ ಹೇಳುತ್ತಾರೆ:

"ಸರಿಯಾದ ಗಂಡೊದಗಿ
ಹೆಣ್ಣು ಸುಖವಾಗಿರಲಿ,
ತಡವಾದರೇನಂತೆ ನಷ್ಟವಿಲ್ಲ"

ಹಾಗೆಯೇ ನಾನೂ ಒಳ್ಳೆಯದನ್ನು ಹಂಚಿಕೊಳ್ಳುವುದು ತಡವಾದರೇನಂತೆ ನಷ್ಟವಿಲ್ಲ ಎಂದುಕೊಂಡಿದ್ದೇನೆ.


ಒಪ್ಪಿಸಿಕೊಳ್ಳುವಿರಲ್ಲ!

ಉದಯರಶ್ಮಿ ದಿನಪತ್ರಿಕೆ

## ಕಾವ್ಯರಶ್ಮಿ

– ಇಂದುಮತಿ ಶ್ರೀನಿವಾಸ
("ನಮ್ಮ ಕಥಾ ಅರಮನೆ" ಬರಹಗಾರರು)

### ಚಂದದೂರು ನನ್ನೂರು



ಬನ್ನಿ, ನೋಡಿ, ಚಂದಕ್ಕಿಂತ ಚಂದ ನನ್ನೂರು
ಒಡೆಯರು ಆಳಿದ ಊರು ನಮ್ಮ ಮೈಸೂರು
ಅರಮನೆಯ ನಗರ, ವಿಶಾಲವಾದ ಮನದವರು
"ಸಾಂಸ್ಕೃತಿಕ ನಗರ"ದವರು ನನ್ನ ಯಜಮಾನರು

ಮೈಸೂರ್ ಪಾಕ್ ತಿನಿಸು, ಮಲ್ಲಿಗೆ ಹೂ ಮುಡಿಸು
ಕುಕ್ಕರಹಳ್ಳಿ ಕೆರೆ ಸುತ್ತು, ಚಾಮುಂಡಿ ತಾಯಿಗೆ ನಮಿಸು
ನೋಡು ಮೃಗಾಲಯ, ಮೈಸೂರು ವಿಶ್ವವಿದ್ಯಾಲಯ
ಸೇಂಟ್ ಫಿಲೋಮೆನಾ ಚರ್ಚು, ಪ್ರಸಿದ್ಧ ಗ್ರಂಥಾಲಯ

ಭಾರತದ ಹೆಮ್ಮೆಯ ಮರಳು ಶಿಲ್ಪ ಮ್ಯೂಸಿಯಮ್ಮು
ಮಕ್ಕಳಿಗೆ ಆಕರ್ಷಣೀಯ ರೈಲ್ವೇ ಮ್ಯೂಸಿಯಮ್ಮು
ಕಾರಂಜಿ ಕೆರೆ, ಬೃಂದಾವನ ಉದ್ಯಾನ ಸುತ್ತಾಡಿರಿ
ಮೈಸೂರು ರೇಷ್ಮೆ ಸೀರೆ, ಶ್ರೀಗಂಧವನ್ನು ಮರೆಯದಿರಿ

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR